# "ಗ್ರಾಮೀಣ ಬಡಜನರ ಉತ್ತಮ ಆರೋಗ್ಯಕ್ಕಾಗಿ ಸಶಕ್ತತೆ"

**"EMPOWERMENT OF THE RURAL POOR FOR BETTER HEALTH"**

**ತರಬೇತಿ ಕೈಪಿಡಿ**

***TRAINING MANUAL***

**ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಬಿಳಿಗಿರಿರಂಗನಬೆಟ್ಟ, ಯಳಂದೂರು ತಾಲ್ಲೂಕು**

**VIVEKANANDA GIRIJANA KALYANA KENDRA, B R HILLS, KARNATAKA.**

# ‘‘ಗ್ರಾಮೀಣ ಬಡಜನರ ಉತ್ತಮ ಆರೋಗ್ಯಕ್ಕಾಗಿ ಸಶಕ್ತತೆ’’

ತರಬೇತಿ ಕೈಪಿಡಿ

(ಪಿ.ಆರ್.ಎ. ಮತ್ತು ಸೂಕ್ಷ್ಮ ಯೋಜನೆ ಬಗ್ಗೆ)

(PRA & Micro Planning)

VGKK

ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ, ಬಿಳಿಗಿರಿರಂಗನಬೆಟ್ಟ

ಮತ್ತು

ಕರುಣಾ ಟ್ರಸ್ಟ್, ತಿ. ನರಸೀಪುರ

Karuna Trust

ನೆರವು

ವಿಶ್ವ ಆರೋಗ್ಯ ಸಂಸ್ಥೆ (WHO)

ಮತ್ತು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು MOFHW.

ಭಾರತ ಸರ್ಕಾರ, ನವದೆಹಲಿ.


ಸಂಪಾದಕರು

1. ಡಾ: ಹೆಚ್. ಸುದರ್ಶನ್
   ಗೌರವ ಕಾರ್ಯದರ್ಶಿಗಳು, ವಿ.ಜಿ.ಕೆ.ಕೆ, ಬಿಳಿಗಿರಿರಂಗನಬೆಟ್ಟ.
2. ಎಸ್. ಗಂಗಾಧರ ನಾಯಕ
   ಯೋಜನಾಧಿಕಾರಿ, ಕರುಣಾ ಟ್ರಸ್ಟ್. ತಿ. ನರಸೀಪುರ.

# ಒಳಪುಟಗಳಲ್ಲಿ


| ಕ್ರ.ಸಂ. | ವಿಷಯ | ಪುಟಗಳ ಸಂಖ್ಯೆ |
|---|---|---|
| 01. | ಮುನ್ನುಡಿ | 01 |
| 02. | ಒಂದು ಪರಿಚಯ (ಹಿನ್ನಲೆ) | 02 |
| | ಯೋಜನೆಯ ಬಗ್ಗೆ | |
| | ಯೋಜನೆಯ ಉದ್ದೇಶ | |
| | ಯೋಜನೆಯ ಕಾರ್ಯಕ್ಷೇತ್ರ | |
| | ಒಳಗೊಂಡಿರುವ ಅಂಶಗಳು | |
| | ಯೋಜನೆಯ ಕಾರ್ಯತಂತ್ರ | |
| 03. | ಸಂವಹನ | 05 |
| 04. | ಸಮುದಾಯದ ಸಹಭಾಗಿತ್ವ | 06 |
| 05. | ಗ್ರಾಮದಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮದ ಬಗ್ಗೆ | 08 |
| 06. | ಪಿ.ಆರ್.ಎ. ಮತ್ತು ಸೂಕ್ಷ್ಮ ಯೋಜನೆ | 09 |
| | ಒಳ್ಳೆಯ ಲಕ್ಷಣಗಳು | |
| | ಪಿ.ಆರ್.ಎ. ಮಾಡುವ ಕಾರ್ಯಕರ್ತನ ಲಕ್ಷಣಗಳು | |
| | ಪಿ.ಆರ್.ಎ ಯ ವಿವಿಧ ವಿಧಾನಗಳು | |
| 07. | ಗ್ರಾಮದ ಇತಿಹಾಸದ ಬಗ್ಗೆ | 09 |
| 08. | ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆ | 10 |
| 09. | ಋತುಮಾನ ನಕ್ಷೆ | 11 |
| 10. | ಪೈನಕ್ಷೆ | 12 |
| 11. | ಚಪಾತಿ ನಕ್ಷೆ | 13 |
| 12. | ಸಂಪತ್ತಿನವಾರು ಶ್ರೇಣಿಕರಣ | 14 |
| 13. | ಮ್ಯಾಟ್ರಿಕ್ಸ್ ಶ್ರೇಣಿಕರಣ | 15 |
| 14. | ಕಾಲ್ನಡಿಗೆ ನಕ್ಷೆ | 16 |
| 15. | ಸುಲಲಿತವಾಗಿ ಬರುವ ನಕ್ಷೆ | 17 |
| 16. | ಸಮೀಕ್ಷೆ | 17 |
| | ಪಿ. ಆರ್.ಎ ಮತ್ತು ಸೂಕ್ಷ್ಮ ಯೋಜನೆ ಮಾಡುವುದು ಹೇಗೆ | |
| 17. | ಮಾದರಿ ಕಾರ್ಯಯೋಜನೆ | |
| 18. | ದಾಖಲೀಕರಣದ ಬಗ್ಗೆ | 18 |
| 19. | ಅನುಬಂಧಗಳು: | |
| | ಅ) ಸಾಮಾಜಿಕ ಸಂಪನ್ಮೂಲ ನಕ್ಷೆ | |
| | ಆ) ಸಂಪತ್ತಿನವಾರು ಶ್ರೇಣೀಕರಣ | |
| | ಇ) ಋತುಮಾನ ನಕ್ಷೆ | |
| | ಈ) ಪೈ ನಕ್ಷೆ | |
| | ಉ) ಚಪಾತಿ ನಕ್ಷೆ | |
| | ಊ) ಮ್ಯಾಟ್ರಿಕ್ಸ್ ಶ್ರೇಣೀಕರಣ | |
| | ಋ) ಕಾಲ್ನಡಿಗೆ ನಕ್ಷೆ | |
| | ಎ) ಸುಲಲಿತವಾಗಿ ಬರುವ ನಕ್ಷೆ | |
| | ಏ) ಗ್ರಾಮದ ಇತಿಹಾಸದ ಬಗ್ಗೆ | |
| | ಐ) ಮಾದರಿ ಕ್ರಿಯಾ ಯೋಜನೆ | |

:- ಮುನ್ನುಡಿ:-

" ಗ್ರಾಮೀಣ ಬಡಜನರ ಉತ್ತಮ ಆರೋಗ್ಯಕ್ಕಾಗಿ ಸಶಕ್ತತೆ" (EMPOWERMENT OF THE RURAL POOR FOR BETTER HEALTH) ಎಂಬ ಕಾರ್ಯಕ್ರಮವು ವಿಶ್ವ ಆರೋಗ್ಯ ಸಂಸ್ಥೆಯ ನೆರವಿನೊಂದಿಗೆ ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯ ಸಹಯೋಗ ದೊಂದಿಗೆ ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕನ್ನು ಈ ಕಾರ್ಯಕ್ರಮಕ್ಕಾಗಿ ತೆಗೆದುಕೊಂಡಿರುವುದು ತುಂಬಾ ಸಂತೋಷವನ್ನುಂಟು ಮಾಡಿದೆ.

ಗ್ರಾಮೀಣ ಬಡಜನರಿಗೆ ಉತ್ತಮ ಆರೋಗ್ಯಕ್ಕಾಗಿ ಅವರನ್ನು ಸಶಕ್ತತ್ತಾರನ್ನಾಗಿ ಮಾಡಬೇಕಾದ ಅನಿವಾರ್ಯತೆ ಇದೆ. ಗ್ರಾಮೀಣ ಬಡಜನರಿಗೆ ಆರೋಗ್ಯ ಸೇವೆಗಳು ಸೂಕ್ತವಾಗಿ ತಲುಪದೇ ಇರುವುದು, ಸರ್ಕಾರದ ಸೇವೆಗಳನ್ನು ಸೂಕ್ತವಾಗಿ ಬಳಸಿಕೊಳ್ಳದೇ ಇರುವುದು, ಆರೋಗ್ಯದ ಕಾರಣಕ್ಕಾಗಿ ಅನಾವಶ್ಯಕ ವೆಚ್ಚಗಳನ್ನು ಮಾಡುತ್ತಿರುವುದು ಎಲ್ಲೆಡೆಯು ಕಂಡುಬರುತ್ತದೆ. ಆದುದರಿಂದ ಇವುಗಳನ್ನು ಜನರೇ ಸರಿಪಡಿಸಿಕೊಂಡು **ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ** ಎಂಬುದನ್ನು ಮನಗಂಡು ಸೂಕ್ತ ರೀತಿಯಲ್ಲಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಶಕ್ತರನ್ನಾಗಿ ಮಾಡಲು ಹಳ್ಳಿಗಳಲ್ಲಿ ಪಿ.ಆರ್.ಎ. (Praticipatory Rural Appraisal) ಮತ್ತು ಸೂಕ್ಷ್ಮ ಯೋಜನೆಯ (Micro Planning) ಕಾರ್ಯಕ್ರಮಗಳನ್ನು ಮಾಡುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶ. ಇದುವರೆವಿಗೂ ಆರೋಗ್ಯ ಕಾರ್ಯಕ್ರಮಗಳಲ್ಲಿ ಪಿ.ಆರ್.ಎ ಮತ್ತು ಸೂಕ್ಷ್ಮ ಯೋಜನೆಗಳನ್ನು ಅಳವಡಿಸಿಕೊಂಡು ಕಾರ್ಯಕ್ರಮಗಳು ಭಾರತ ದೇಶದಲ್ಲಿ ಬಹಳಷ್ಟು ಕಡಿಮೆ. ಈ ನಿಟ್ಟಿನಲ್ಲಿ ಈ ಕಾರ್ಯಕ್ರಮ ಒಂದು ವಿಶೇಷ ಹಾಗೂ ಮಾದರಿಯಾಗಿರುತ್ತದೆ. ಇಂತಹ ತರಬೇತಿಗಾಗಿ ಈ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ.

ಟಿ. ನರಸೀಪುರ ತಾಲ್ಲೂಕಿನಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆದು ಇದೊಂದು ಭಾರತ ದೇಶಕ್ಕೆ ಮಾದರಿಯಾಗಿರುತ್ತದೆ ಎಂಬ ನಂಬಿಕೆ ವಿಶ್ವಾಸ ನಮಗಿದೆ.

ಈ ಕಾರ್ಯಕ್ರಮದ ಯಶಸ್ಸಿಗಾಗಿ ಸಹಕಾರ ನೀಡುತ್ತಿರುವ ವಿಶ್ವ ಆರೋಗ್ಯ ಸಂಸ್ಥೆ, ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ಸುಜಾತ ರಾವ್, ಐ.ಎ.ಎಸ್ ರವರಿಗೂ, ಮೈಸೂರು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ, ಶ್ರೀಯುತ ಬಿ.ಪಿ. ಕನಿರಾಂ, ಐ.ಎ.ಎಸ್ ರವರಿಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ: ಜಗದೀಶ್ ರವರಿಗೂ, ಆರೋಗ್ಯ ಇಲಾಖಾ ಸಿಬ್ಬಂಧಿಗಳಿಗೂ, ಕರುಣಾ ಟ್ರಸ್ಟ್ ಸಂಸ್ಥೆ ಟಿ. ನರಸೀಪುರ ಶಾಖೆ ಸಿಬ್ಬಂದಿಗಳಿಗೂ ವಿವಿಧ ಗ್ರಾಮಗಳಿಂದ ಬಂದಿರುವ ಸ್ವಯಂ ಸೇವಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಈ ಕಾರ್ಯಕ್ರಮವು ಯಶಸ್ವಿಯಾಗಲೆಂದು ಈ ಮೂಲಕ ಹಾರೈಸುತ್ತೇನೆ.

ವಂದನೆಗಳು,

ಎಸ್. ಗಂಗಾಧರ ನಾಯ್ಕ
ಯೋಜನಾಧಿಕಾರಿ
ಕರುಣಾ ಟ್ರಸ್ಟ್, ಟಿ. ನರಸೀಪುರ ಶಾಖೆ.

ಡಾ: ಎಚ್. ಸುದರ್ಶನ್
ಗೌರವ ಕಾರ್ಯದರ್ಶಿಗಳು
ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ
ಬಿಳಿಗಿರಿರಂಗನಬೆಟ್ಟ.

# "ಗ್ರಾಮೀಣ ಬಡಜನರ ಉತ್ತಮ ಆರೋಗ್ಯಕ್ಕಾಗಿ ಸಶಕ್ತತೆ"

## ಒಂದು ಪರಿಚಯ

**ಹಿನ್ನಲೆ:-** Background

ಭಾರತ ದೇಶವು ಬಡ ಜನರಿಂದ ಕೂಡಿದ ಸಂಪದ್ಭರಿತವಾದ ದೇಶವಾಗಿರುತ್ತದೆ. ಗ್ರಾಮೀಣ ಪ್ರದೇಶಗಳಿಂದ ಕೂಡಿದ ಭಾರತ ದೇಶ ಕೃಷಿಯನ್ನು ಹೆಚ್ಚಾಗಿ ಅವಲಂಬಿಸಿದೆ ಶೇಕಡ 40ಕ್ಕೂ ಹೆಚ್ಚು ಜನ ಬಡತನದ ರೇಖೆಯ ಕೆಳಗಿರುವ ಭಾರತದಲ್ಲಿ ಶೇಕಡ 70 ರಷ್ಟು ಗ್ರಾಮೀಣ ವಾಸಿಗಳಾಗಿದ್ದಾರೆ.

" ಆರೋಗ್ಯವೆ ಭಾಗ್ಯ" ಎಂಬ ನಾಣ್ನುಡಿಯನ್ನು ಪ್ರಚುರಪಡಿಸಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಬಡಜನರ ಆರೋಗ್ಯ ಮಟ್ಟವನ್ನು ಸುಧಾರಿಸಲು ರಾಷ್ಟ್ರಮಟ್ಟ, ರಾಜ್ಯಮಟ್ಟ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟಗಳಲ್ಲಿ ಆರೋಗ್ಯ ಸೇವಾ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಂಡಿವೆ. ಹೀಗಿದ್ದರು ಗ್ರಾಮೀಣ ಮಟ್ಟದ ಬಡಜನರಿಗೆ ವೈದ್ಯಕೀಯ ಸೌಲಭ್ಯಗಳು ಸರಿಯಾಗಿ ತಲುಪುತ್ತಿಲ್ಲ. ಇದೇ ಸಂದರ್ಭದಲ್ಲಿ ಸರ್ಕಾರದ ಈ ಸೇವಾ ಕಾರ್ಯಕ್ರಮಗಳು ಸೂಕ್ತ ಮಾಹಿತಿಯ ಕೊರತೆಯಿಂದಾಗಿ ಜನರಲ್ಲಿ ಮೂಢನಂಬಿಕೆ ಹಾಗೂ ಅಪನಂಬಿಕೆಗಳು ಬೆಳೆದು ವೈದ್ಯಕೀಯ ಸೌಲಭ್ಯಗಳನ್ನು ಪಡೆಯದೆ ಹಿಂದುಳಿದಿದ್ದಾರೆ.

ಹೀಗಾಗಿ ಬಡಜನರು ತಾವು ದುಡಿದು ಸಂಪಾದಿಸಿದ ಬಹು ಪಾಲು ಹಣವನ್ನು ಖಾಸಗಿ ಆಸ್ಪತ್ರೆಗಳಿಗೆ ಆರೋಗ್ಯದ ಕಾರಣಕ್ಕಾಗಿ ವ್ಯಯ ಮಾಡುತ್ತಿರುವುದು ಕಂಡುಬರುತ್ತಿದೆ. ಅರ್ಹ ಬಡಜನರಿಗೆ ಆರೋಗ್ಯ ಸೇವೆ ದೊರಕದೆ ಇರುವುದು ಹಾಗೂ ವಂಚಿತರಾಗುತ್ತಿರುವುದರ ಹಿಂದೆ ಆರೋಗ್ಯ ಕಾರ್ಯಕ್ರಮಗಳಲ್ಲಿನ ಕೊರತೆಯು ಇದೆ. ಬಡಜನರು ಮತ್ತು ಸರ್ಕಾರದ ಆರೋಗ್ಯ ಸೇವೆಯ ಮಧ್ಯೆ ಅಂತರವಿರುವುದು ಕಂಡು ಬರುತ್ತಿದೆ. ಇಂದಿನ ದಿನದಲ್ಲಿ ಈ ಅಂತರವನ್ನು ತೆಗೆದು ಹಾಕುವುದು ಹಾಗೂ ಬಡಜನರಿಗೆ ಸೂಕ್ತ ಆರೋಗ್ಯ ಸೇವೆ ದೊರಕುವಂತೆ ಮಾಡುವುದು, ಸಾರ್ವಜನಿಕರನ್ನು ಪ್ರೇರೆಪಿಸುವುದು ನಮ್ಮ ನಿಮ್ಮೆಲ್ಲರ ಮುಂದಿರುವ ಜವಾಬ್ದಾರಿ ಹಾಗೂ ಆದ್ಯ ಕರ್ತವ್ಯವಾಗಿದೆ.

**ಯೋಜನೆಯ ಬಗ್ಗೆ:-** About the project

***"EMPOWERMENT OF THE RURAL POOR FOR BETTER HEALTH"***

" ಗ್ರಾಮೀಣ ಬಡಜನರ ಉತ್ತಮ ಆರೋಗ್ಯಕ್ಕಾಗಿ ಸಶಕ್ತತೆ" ಗಾಗಿ ಕಾರ್ಯಕ್ರಮವು " ವಿಶ್ವ ಆರೋಗ್ಯ ಸಂಸ್ಥೆ" ಯ ನೆರವಿನೊಂದಿಗೆ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣಸೇವೆಗಳ ಇಲಾಖೆಯು ದೇಶದಲ್ಲಿ ವಿವಿಧ ರಾಜ್ಯಗಳ 6 ಬ್ಲಾಕ್‌ಗಳಲ್ಲಿ ಪ್ರಾಯೋಗಿಕವಾಗಿ ಈ ಕಾರ್ಯಕ್ರಮವನ್ನು ನುರಿತ ಸ್ವಯಂ ಸೇವಾ ಸಂಸ್ಥೆಗಳ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಆಡಳಿತದ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ. ಈ ಕೆಳಕಂಡ ರಾಜ್ಯಗಳಲ್ಲಿ ಪ್ರಾಯೋಗಿಕವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

| ಕ್ರ ಸಂ | ರಾಜ್ಯ | ಜಿಲ್ಲೆ | ಬ್ಲಾಕ್ | ಸ್ವಯಂಸೇವಾ ಸಂಸ್ಥೆ ಹೆಸರು |
|---|---|---|---|---|
| 01 | ಕರ್ನಾಟಕ | ಮೈಸೂರು | ತಿ. ನರಸೀಪುರ | ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಮತ್ತು ಕರುಣಾ ಟ್ರಸ್ಟ್ |
| 02 | ಮಹಾರಾಷ್ಟ್ರ | ಥಾಣೆ | | ಕಷ್ಟಕಾರಿ ಸಂಘಟನೆ |
| 03 | ಮಹಾರಾಷ್ಟ್ರ | ಔರಂಗಬಾದ್ | | ಪಾಚೋಡ್ ಸೇವಾ |
| 04 | ಉತ್ತರ ಪ್ರದೇಶ | ವಾರಣಾಸಿ | | ಭಾರತೀಯ ಆರೋಗ್ಯ ಸ್ವಯಂ ಸೇವಾ ಸಂಸ್ಥೆ |
| 05 | ಮಧ್ಯಪ್ರದೇಶ | ಶಿವಪುರಿ | ಶಿವಪುರಿ | : : |
| 06 | ರಾಜಾಸ್ಥಾನ್ | ಚಿತ್ತೋರ್‌ಗರ್ | | ಪ್ರಯಾಸ್ |

**ಯೋಜನೆಯ ಉದ್ದೇಶ:** Project objectives

ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳಿಂದ ಗ್ರಾಮಗಳಿಗೆ ತೆರಳಿ ಪಿ.ಆರ್.ಎ ಮತ್ತು ಸೂಕ್ಷ್ಮಯೋಜನೆಯ ಮುಖಾಂತರ ಗ್ರಾಮದ ಜನತೆಯಿಂದ ಈ ಕೆಳಕಂಡವುಗಳಿಗಾಗಿ ಕಾರ್ಯನಿರ್ವಹಿಸಲಾಗುವುದು.

1. ಪಿ.ಆರ್.ಎ. ಯನ್ನು ಜನರಿಂದಲೇ ಮಾಡಿಸಿ ಯೋಜನೆಯಲ್ಲಿ ಅವರೇ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು.
2. ಜನರಿಂದಲೇ ಆರೋಗ್ಯದ ಸಮಸ್ಯೆಗಳು, ಸೌಲಭ್ಯಗಳ ಬಗ್ಗೆ, ಆರೋಗ್ಯದ ವೆಚ್ಚದ ಬಗ್ಗೆ ಜನರನ್ನು ಒಳಗೊಂಡು ಮಾಹಿತಿ ಸಂಗ್ರಹಿಸುವುದು.
3. ಜನರನ್ನು ಪ್ರಾಥಮಿಕ ಆರೋಗ್ಯ ಸೇವೆಗಳ ಲಭ್ಯತೆ ಹಾಗೂ ಕೊರತೆಗಳ ಬಗ್ಗೆ ಚಿಂತಿಸುವಂತೆ ಮಾಡುವುದು ಆ ಮೂಲಕ ಜನರಲ್ಲಿ ಅರಿವು ಮೂಡಿಸುವುದು.
4. ಜನರೇ ಆಯಾ ಗ್ರಾಮದ ಆರೋಗ್ಯದ ಸೇವೆಗಳ ಬಗ್ಗೆ ನಿಗಾವಹಿಸುವಂತೆ ಮಾಡುವುದು.
5. ಸರ್ಕಾರದಿಂದ ದೊರೆಯುವ, ದೊರೆಯಬೇಕಾದ ಆರೋಗ್ಯ ಸೇವೆಗಳ ಬಗ್ಗೆ ಜನರಲ್ಲಿ ಸೂಕ್ತ ಮಾಹಿತಿಯನ್ನು ನೀಡಿ ಅರ್ಹ ಬಡವರಿಗೆ ತಲುಪುವಂತೆ ; ಪಡೆದುಕೊಳ್ಳುವಂತೆ ಪ್ರೇರೇಪಿಸುವುದು.
6. ರೋಗ ಬರದಂತೆ ತಡೆಗಟ್ಟಬಹುದಾದ ವಿಧಾನಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು.
7. ಗ್ರಾಮ ಸಭೆಗಳನ್ನು ಬಲಯುತಗೊಳಿಸುವ ಪ್ರಯತ್ನ ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

**ಯೋಜನೆಯ ಕಾರ್ಯಕ್ಷೇತ್ರ:** Field Area of Project

ಯೋಜನೆಯ ಗುರಿಯು ಒಂದು ಬ್ಲಾಕ್ (ಟಿ. ನರಸೀಪುರ ತಾಲ್ಲೂಕು) ಆಗಿದ್ದು 250 ಗ್ರಾಮಗಳಲ್ಲಿ ಕಾರ್ಯ ನಿರ್ವಹಿಸುವ ಗುರಿಯನ್ನು ಹೊಂದಿರುತ್ತದೆ. 1999-2000 ಮಾರ್ಚಿಗೆ ಮೊದಲ ಹಂತದ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

ಇದರ ಮೌಲ್ಯ ಮಾಪನದ ನಂತರ ಅವಶ್ಯವಿದ್ದರೆ ಮುಂದಿನ ಯೋಜನೆಯ ಬಗ್ಗೆ ಪರಿಶೀಲಿಸಿ ಕಾರ್ಯಕ್ರಮ ರೂಪಿಸಲಾಗುತ್ತದೆ.

**ಯೋಜನೆಯು ಒಳಗೊಂಡಿರುವ ಪ್ರಮುಖ ಅಂಶಗಳು** Important features of the project

1. ಆರೋಗ್ಯದ ಸೇವೆಯಲ್ಲಿ ಅನವಶ್ಯಕ ವೆಚ್ಚ, ವ್ಯರ್ಥ ಕಾಲಹರಣ ಹಾಗೂ ಆರ್ಥಿಕ ಹಾನಿಯ ಬಗ್ಗೆ ಜನರಿಗೆ ಮತ್ತು ಕುಟುಂಬಗಳಿಗೆ ಸೂಕ್ತ ಶಿಕ್ಷಣ ದೊರಕಿಸುವುದು.

2. ಕನಿಷ್ಟ ಸೌಲಭ್ಯದ ಬಗ್ಗೆ ಹಾಗೂ ಶುದ್ಧ ಕುಡಿಯುವ ನೀರು, ಶೌಚಾಲಯ, ವೈಯಕ್ತಿಕ ಸ್ವಚ್ಛತೆ, ಮುಂತಾದವುಗಳ ಬಗ್ಗೆ ಅರಿವು ಮೂಡಿಸುವುದು.

3. ಗ್ರಾಮದ ಹತ್ತಿರದಲ್ಲಿರುವ ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಘಟಕ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ ದೊರೆಯುವ ಸೌಲಭ್ಯದ ಬಗ್ಗೆ ಜನರಲ್ಲಿ ಜಾಗೃತಿಯನ್ನುಂಟು ಮಾಡುವುದು.

4. ಸಮುದಾಯ ಆರೋಗ್ಯ ಕೇಂದ್ರ, ಜಿಲ್ಲಾ ಆಸ್ಪತ್ರೆಯ ರೆಫರಲ್ ಸೇವೆಗಳನ್ನು ಬಳಸಿಕೊಳ್ಳಲು ಮತ್ತುಅಭಿವೃದ್ಧಿ ಪಡಿಸಲು ಪ್ರೇರೇಪಿಸುವುದು.

5. ಗ್ರಾಮಗಳಲ್ಲಿ ಆರೋಗ್ಯ ಜಾಗೃತಿಗಾಗಿ ಗ್ರಾಮ ಆರೋಗ್ಯ ಸಮಿತಿಗಳನ್ನು ರಚಿಸುವುದು.

**ಯೋಜನೆಯ ಕಾರ್ಯತಂತ್ರ:-** Methodology.

1. ಗ್ರಾಮದ ಜನರಿಂದಲೇ ಪಿ.ಆರ್.ಎ. ಮೂಲಕ ಸಮರ್ಥವಾಗಿ ಅನಾವಶ್ಯಕ ವೆಚ್ಚದ ಬಗ್ಗೆ, ಅದನ್ನು ಕಡಿಮೆ ಮಾಡುವ ಬಗ್ಗೆ ಹಾಗೂ ಯಾರು ಹೆಚ್ಚಾಗಿ ಆರೋಗ್ಯದ ಸೇವೆಗಳಿಂದ ವಂಚಿತರಾಗಿದ್ದಾರೆ? ಏಕೆ? ಎಂಬುದನ್ನು ಜನರಿಂದಲೇ ಮನವರಿಕೆ ಮಾಡಿಕೊಡುವಂತೆ ಮಾಡುವುದು ಹಾಗೂ ಜನರಿಂದಲೆ ಈ ಸಮಸ್ಯೆ ಮತ್ತು ಅವುಗಳ ನಿವಾರಣೆಗಾಗಿ ಸೂಕ್ತ ಮಾರ್ಗಗಳನ್ನು ಕಂಡು ಕೊಳ್ಳುವಂತೆ ಮಾಡುವುದು.

2. ಪಿ. ಆರ್.ಎ. ಯಿಂದ ಹೊರಬಂದ ಅಂಶಗಳ ಆಧಾರದ ಮೇಲೆ ಜನರಿಂದಲೆ ಗ್ರಾಮ ಆರೋಗ್ಯ ಸಮಿತಿಗಳ ರಚನೆ ಮಾಡುವುದು.

3. ಗ್ರಾಮ ಸಮಿತಿಗಳಿಂದ ಆಯ್ಕೆ ಮಾಡಿದ ತಲಾ 3 ಜನರಂತೆ ಗ್ರಾಮ ಸಮಿತಿಯಂಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟದಲ್ಲಿ ತರಬೇತಿಯನ್ನು ನೀಡುವುದು.

4. ಗ್ರಾಮ ಆರೋಗ್ಯ ಸಮಿತಿಯ ಗ್ರಾಮದ ಆರೋಗ್ಯದ ಸಮಸ್ಯೆಗಳನ್ನು ನಿವಾರಿಸಲು ಕ್ರಿಯಾ ಯೋಜನೆಯನ್ನು ತಯಾರಿಸುವುದು ಮತ್ತು ಕಾರ್ಯ ಪ್ರವೃತ್ತರನ್ನಾಗಿಸುವುದು.

******

## ಸಂವಹನ (Communication)

'ಸಂವಹನ' ವನ್ನು ವಿವಿಧ ರೀತಿಯಲ್ಲಿ ವಿವರಿಸಬಹುದು.

ಇದು ಮಾನವನ ಸಂಬಂಧಗಳಲ್ಲಿ ಒಂದು ಭಾಗ ಪರಸ್ಪರರ ಮೇಲೆ ಪ್ರಭಾವ ಬೀರಲು ಇರುವ ಮಾರ್ಗ.

ತನ್ನ ವರ್ತನೆಯ ಮೂಲಕ ಆಲೋಚನೆ, ಮಾಹಿತಿ, ಮನೋಭಾವ, ರೀತಿ ನೀತಿ, ಮತ್ತು ಮೌಲ್ಯಗಳನ್ನು ಸಂವಹಿಸುವ ಮಾಧ್ಯಮ.

ಸೀಮಿತ ಅರ್ಥದಲ್ಲಿ ಹೇಳುವುದಾದರೆ ಸಂವಹನ ಒಬ್ಬನಿಂದ ಇನ್ನೊಬ್ಬನಿಗೆ ಮಾಹಿತಿಯನ್ನು ವರ್ಗಾಯಿಸುವ ಮಾಧ್ಯಮ.

### ಯಶಸ್ವಿ ಸಂವಹನಕ್ಕೆ ಹಲವಾರು ಅಡಚಣೆಗಳು:- Barriers to effective communication

1. ಸಮರ್ಪಕವಾಗಿ ಕೇಳದೆ ಇರುವುದು.
2. ಕೇಳುಗರು ತಮಗೆ ಪ್ರಿಯವಾದದನ್ನು ಮಾತ್ರ ಕೇಳಿಸಿಕೊಳ್ಳುವುದು.
3. ಮಾಹಿತಿ ನೀಡುವವರು ಮತ್ತು ಕೇಳುವವರು ಒಂದೇ ವಿಷಯವನ್ನು ಬೇರೆ ಬೇರೆ ದೃಷ್ಟಿಯಿಂದ ನೋಡುವುದು.
4. ಕೇಳುಗನು ಯಾರು ಹೇಳುತ್ತಿದ್ದಾರೆ ಎಂಬುದರ ಬಗ್ಗೆ ಹೆಚ್ಚು ಗಮನಕೊಡುತ್ತಾನೆಯೇ ಹೊರತು ಏನು ಹೇಳತ್ತಿದ್ದಾರೆ ಎಂಬುದರ ಬಗ್ಗೆ ಗಮನ ಕೊಡದಿರುವುದು.
5. ಕೇಳುಗ ತಾನು ಕೇಳುತ್ತಿರುವ ವಿಷಯಕ್ಕೂ ತನ್ನ ಅಭಿಪ್ರಾಯಕ್ಕೂ ದ್ವಂದ್ವವಿದ್ದರೆ ಅದನ್ನು ನಿರ್ಲಕ್ಷಿಸುತ್ತಾನೆ.
6. ಒಂದೇ ಮಾತು, ಮಾತನಾಡುವವನಿಗೆ ಮತ್ತು ಕೇಳುಗನಿಗೆ ಬೇರೆ ಬೇರೆ ಅರ್ಥಗಳನ್ನು ನೀಡುತ್ತದೆ.
7. ಸಂಭಾಷಣೆಯಲ್ಲಿ ಪಾಲ್ಗೊಂಡವರು ಮಾತನಾಡುವಾಗ ತಾವು ಬಳಸಿದ ಸನ್ನೆಗಳು ಮತ್ತು ಮಾತಿನ ವೈಖರಿಯನ್ನು ಅಲಕ್ಷಿಸುವುದು.
8. ಸಂಭಾಷಣೆಯು ಪಾಲುದಾರರ ಭಾವೋದ್ರೇಕಗಳು ಸಂವಹನ ಕ್ರಿಯೆಯನ್ನು ಅಡ್ಡಿಪಡಿಸುತ್ತವೆ.
9. ಅಪೂರ್ಣ ಮಾಹಿತಿ.
10. ನಿಗಧಿತ ಸಮಯ, ಸ್ಥಳ, ಸಮರ್ಪಕವಾಗಿಲ್ಲದಿರುವುದು.
11. ಸಮರ್ಪಕ ಉದ್ದೇಶ ಇಲ್ಲದಿರುವುದು.

How to communicate effectively.

### 'ಸಂವಹನ' ವನ್ನು ಪರಿಣಾಮಕಾರಿಯಾಗಿ ಈ ಕೆಳಕಂಡಂತೆ ಮಾಡಡಬಹುದು:

1. ಚಿಹ್ನೆಗಳು, ಬಿತ್ತಿಪತ್ರಗಳು, ಚಲನಚಿತ್ರಗಳು ಮತ್ತು ಪ್ರದರ್ಶನದಂತಹ, ದೃಶ್ಯ ಸಾಧನಗಳು ಬಳಸುವುದರಿಂದ.
2. ಫ್ಲೈಡ್‌ಚಾರ್ಟುಗಳು, ಛಾಯಚಿತ್ರಗಳು, ದೃಕ್‌ಬೋಧನಾ ಸಾಮಗ್ರಿಗಳನ್ನು ಬಳಸುವುದರಿಂದ.
3. ಧ್ವನಿ ಮುದ್ರಣದಂತಹ ಶ್ರವಣ ಸಾಧನಗಳನ್ನು ಬಳಸಿ.
4. ವೃತ್ತಪತ್ರಿಕೆಗಳು, ನಿಯತಕಾಲಿಕೆಗಳು, ರೇಡಿಯೋ, ವಿಡಿಯೋ ಮತ್ತು ದೂರದರ್ಶನಗಳಂತಹ ಸಮೂಹಮಾಧ್ಯಮ ಗಳನ್ನು ಬಳಸುವುದರಿಂದ ಪರಿಣಾಮಕಾರಿಯಾಗಿ ಸಂವಹನವನ್ನು ಮಾಡಬಹುದು.

## ಸಂವಹನದ ವಿವಿಧ ವಿಧಾನಗಳು:- Methods of Comm

1. ಹಾಡುವುದು
2. ನಾಟಕ: ಬೀದಿನಾಟಕ
3. ಕಥೆ ಹೇಳುವುದು
4. ಕಾರ್ಡ್‌ಗಳಮೂಲಕ (ಫ್ಲಾಶ್‌ಕಾರ್ಡ್)
5. ಗೊಂಬೆಯಾಟ
6. ಜಾದು ಪ್ರದರ್ಶನ
7. ವೀಡಿಯೋ ಪ್ರದರ್ಶನ
8. ರೇಡಿಯೋ ಪ್ರದರ್ಶನ
9. ಭಿತ್ತಿ ಪತ್ರಗಳು
10. ಕರಪತ್ರಗಳು, ಇತ್ಯಾದಿ.

## ಪರಿಣಾಮಕಾರಿಯಾಗಿ ಸಂವಹನ ಮಾಡಬೇಕಾದರೆ,

ಶುಕ್ಲವಾದ / ಸ್ಥಳೀಯವಾದ,

1. ಸೂಕ್ತವಾದ ಭಾಷೆ ಬಳಸಬೇಕು.
2. ಬರಹಗಳು ಮತ್ತು ಚಿತ್ರಗಳ ಮೂಲಕ ತಿಳಿಸಬೇಕು.
3. ಸಮುದಾಯದ ಅವಶ್ಯಕತೆ, ಆಸಕ್ತಿ, ಮತ್ತು ಸಾಮಾಜಿಕ ಪರಿಮಿತಿಯೊಳಗೆ ವಿವಿಧ ವಿಧಾನಗಳ ಮೂಲಕ ತಿಳಿಸಬೇಕು.
4. ಸೂಕ್ತವಾದ ಸ್ಥಳ, ವೇಳೆ, ನಿಗಧಿಪಡಿಸಬೇಕು.
5. ಸಮುದಾಯದ ಸ್ಥಿತಿಗೆ ಅನುಗುಣವಾಗಿ ಸೂಕ್ತಮಾಹಿತಿಗಳನ್ನು ಸೂಕ್ತವೇಳೆಯಲ್ಲಿ ಮತ್ತು ಸೂಕ್ತ ಸ್ಥಳದಲ್ಲಿ ನೀಡುವುದು.
6. ಮುಕ್ತವಾದ ವಾತಾವರಣ ನಿರ್ಮಾಣಮಾಡುವುದು.
7. ಪರಸ್ಪರರನ್ನು ಗೌರವಿಸುವುದು.
8. ಸಮುದಾಯ ಪಾಲ್ಗೊಳ್ಳುವಂತೆ ಮಾಡುವುದು.
9. ಸಮುದಾಯದಿಂದ ಸೂಕ್ತ ಪ್ರತಿಕ್ರಿಯೆ ಬರುವಂತೆ ಪ್ರೇರೇಪಿಸುವುದು.
10. ಸ್ಥಳೀಯ ಕಲೆ; ಜಾನಪದ ಶೈಲಿ ಮತ್ತು ರೂಪಕಗಳನ್ನು ಬಳಸುವುದು.

## ಸಮುದಾಯದ ಸಹಭಾಗಿತ್ವ Community participation.

ಸಮುದಾಯದ ಸಹಭಾಗಿತ್ವ ಅಥವಾ ಪಾಲ್ಗೊಳುವಿಕೆ ಒಂದು ಪ್ರಕ್ರಿಯೆಯಾಗಿದ್ದು ಈ ಕೆಳಕಂಡವುಗಳಲ್ಲಿ ಸಮುದಾಯ ಪಾಲ್ಗೊಳ್ಳುವಂತೆ ಮಾಡುವುದು ತುಂಬಾ ಉಪಯುಕ್ತವಾಗಿರುತ್ತದೆ.

- ಸಮುದಾಯದ ಬೇಡಿಕೆಗಳನ್ನು ಗುರ್ತಿಸುವುದು.
- ತೀರ್ಮಾನಗಳನ್ನು ತೆಗೆದುಕೊಳ್ಳುವುದು.
- ಯೋಜನೆಗಳಲ್ಲಿ
- ಅನುಷ್ಠಾನ ಕಾರ್ಯಕ್ರಮದಲ್ಲಿ
- ಸೇವೆಗಳನ್ನು ಒದಗಿಸುವುದರಲ್ಲಿ
- ಸಂಪನ್ಮೂಲಗಳ ಕ್ರೋಢಿಕರಣ
- ಕಾರ್ಯಕ್ರಮದ ಮುಂದುವರಿಕೆಗಾಗಿ ಮತ್ತು ಯೋಜನೆಯ ಸ್ಥಿರತೆಗಾಗಿ. ನಿರಂತರತೆಗಾಗಿ

ಸಮುದಾಯ ಪ್ರತಿ ಹಂತದಲ್ಲೂ ಸಹಬಾಗಿತ್ವ ಹೊಂದುವಂತೆ ಮಾಡುವುದು ಸೂಕ್ತವಾಗಿದೆ.

*Importance of Community Participation*

**ಸಮುದಾಯ ಸಹಭಾಗಿತ್ವವು ಈ ಕೆಳಕಂಡವುಗಳಿಗಾಗಿ ತುಂಬಾ ಮುಖ್ಯವಾಗಿರುತ್ತದೆ.**

1. ಸಮುದಾಯದ ಬೇಡಿಕೆ ಮತ್ತು ಆಶಯಗಳನ್ನು ಈಡೇರಿಸಲು.
2. ಜನರ ಜ್ಞಾನ, ಕೌಶಲ್ಯ ಮತ್ತು ಅರಿವನ್ನು ಹೆಚ್ಚಿಸಲು.
3. ಜನರಲ್ಲಿ ಆತ್ಮವಿಶ್ವಾಸ ಮತ್ತು ಆತ್ಮಸ್ಥೈರ್ಯ ಹೆಚ್ಚಿಸಲು.
4. ಸ್ವಯಂ ಸಮಸ್ಯೆಗಳ ಬಗ್ಗೆ ಪರಿಹರಿಸಲು
5. ಹಣ, ವಸ್ತು ಮತ್ತು ಮಾನವಸಂಪನ್ಮೂಲವನ್ನು ವೃದ್ಧಿಸಲು.
6. ವ್ಯವಸ್ಥಿತ ಸಂಪರ್ಕ ಕಲ್ಪಿಸಲು.
7. ಕಾರ್ಯಕ್ರಮದ ಜವಾಬ್ದಾರಿ ತಮ್ಮದು ಎಂಬ ಭಾವನೆ ಉಂಟು ಮಾಡಲು.

ಕೆಲವು ಅಡಚಣೆಗಳು ಕಾರ್ಯಕ್ರಮದಿಂದಾಗಿರುತ್ತದೆ. ಉದಾಹರಣೆ.

- ಕನಿಷ್ಠ ಸೇವೆಗಳನ್ನು ಒದಗಿಸದಿರುವುದು.
- ಸೇವೆಗಳಲ್ಲಿರುವ ಪ್ರಮಾಣಗಳ ಕೊರತೆ.
- ಇತರೆ ಸೇವೆಗಳ ಜೊತೆ ನಿಕಟ ಸಂಪರ್ಕವಿಲ್ಲದಿರುವುದು.

ಕೆಲವು ಅಡಚಣೆಗಳು ಅಸಮರ್ಪಕ ಪ್ರಕ್ರಿಯೆಯಿಂದ ಕೂಡಿದವುಗಳಾಗಿರುತ್ತವೆ. ಉದಾಹರಣೆ

- ಸಮುದಾಯದ ಮುಖಂಡರಲ್ಲಿ ಅಸಮರ್ಪಕ ತಿಳುವಳಿಕೆ.
- ಸ್ಥಳೀಯ ಸಂಘ ಸಂಸ್ಥೆಗಳು ನಿಷ್ಕ್ರಿಯವಾಗಿರುವುದು.
- ಸಮುದಾಯದ ಜನರಲ್ಲಿ ಹೊಂದಾಣಿಕೆ ಇಲ್ಲದಿರುವುದು.

ಇವುಗಳೆಲ್ಲ ಸೂಕ್ತವಲ್ಲದ ವಿಧಾನಗಳಿಂದ ಕೂಡಿರುತ್ತವೆ. ಇವುಗಳನ್ನು ಪರಿಹರಿಸಲು ಸೂಕ್ತವಾದ ಸಮುದಾಯ ಆಧಾರಿತ ವಿಧಾನಗಳಿಂದ ಪ್ರಯತ್ನಿಸಿದಾಗ ಈ ಅಡಚಣೆಗಳನ್ನು ಪರಿಹರಿಸಿ ಸಮುದಾಯವು ಪಾಲ್ಗೊಳ್ಳುವಂತೆ ಮಾಡಬಹುದು.
ಸಮುದಾಯದ ಜೊತೆ ಉತ್ತಮ ಬಾಂಧವ್ಯ ಬೆಳಸಿಕೊಳ್ಳುವುದು.

*How to have good community Rapport*

**ಸಮುದಾಯ ಜೊತೆ ಉತ್ತಮ ಭಾಂದವ್ಯ ಬೆಳೆಸಿಕೊಳ್ಳಲು ಈ ಕೆಳಕಂಡವುಗಳನ್ನು ಅನುಸರಿಸಬೇಕಾಗುತದೆ:**

1. ಆಗಿಂದ್ದಾಗೆ ಜನರಲ್ಲಿ ಸಂಪರ್ಕವಿರಿಸಿಕೊಳ್ಳುವುದು.
2. ಸಮುದಾಯ ಮತ್ತು ಗುಂಪು ಸಭೆಗಳು.
3. ಮನೆ ಮನೆ ಬೇಟಿ.
4. ಕುಟುಂಬಗಳ ಕಾರ್ಯಕ್ರಮದಲ್ಲಿ ಭಾಗವಹಿಸುವುದು.
5. ಸಮುದಾಯದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.
6. ಸಮಸ್ಯಗಳ ಪರಿಹಾರಕ್ಕೆ ಸಹಕರಿಸುವುದು ಮತ್ತು ಸಹಾಯಮಾಡುವುದು.

**ಉತ್ತಮವಾಗಿ ಸಮುದಾಯ ಭಾಗವಹಿಸುವಂತೆ ಮಾಡಲು ಹಾಗೂ ಸಮುದಾಯದ ಜೊತೆ ಉತ್ತಮ ಬಾಂಧವ್ಯ ಬೆಳೆಸಲು:** *To have community participation & to have good community contact.*

1. ಸಮುದಾಯದಲ್ಲಿ, ಜನರಲ್ಲಿ ನಂಬಿಕೆ ಇಡಬೇಕು.
2. ಜನರು ಇರುವ ಸ್ಥಿತಿಯನ್ನು ಒಪ್ಪಿಕೊಳ್ಳಬೇಕು. ಅಂದರೆ ಜನರ ಸಮಸ್ಯೆ ಮತ್ತು ಸ್ಥಿತಿಯನ್ನು ನಂಬಿಕೆಯಿಂದ ಗೌರವಿಸಬೇಕು.
3. ಜನರನ್ನು ಬದಲಾವಣೆ ಮಾಡುವ ಶಕ್ತಿಯಲ್ಲಿ ನಂಬಿಕೆ ಇಡಬೇಕು ಹಾಗೂ ಜನರಲ್ಲಿ ಸಮಸ್ಯೆಗಳ ಬಗ್ಗೆ ಚಿಂತಿಸುವ ಪರಿಹರಿಸುವ ಶಕ್ತಿ ಇದೆ ಎಂಬುದರಲ್ಲಿ ನಂಬಿಕೆ ಇಡಬೇಕು.
4. ಜನರಲ್ಲಿ ಬದಲಾವಣೆ ಬಯಸುವುದಕ್ಕಿಂತ ಮುಂಚಿತವಾಗಿ ಜನರ ವಿಶ್ವಾಸವನ್ನು ಮೊದಲು ಗಳಿಸಬೇಕು.
5. ಜನರ ತೀರ್ಮಾನವನ್ನು ಗೌರವಿಸಬೇಕು. ನಿರ್ಧಾರಗಳನ್ನು ಪರಿಹಾರಗಳನ್ನು ಮೇಲಿಂದ ಮೇಲೆ ಹೇರಬಾರದು.

ಸಮುದಾಯದಲ್ಲಿ, ಜನರಲ್ಲಿ ಸಮಸ್ಯೆಗಳಿದ್ದಂತೆ ಶಕ್ತಿಯು ಇರುತ್ತದೆ. ಅಡಚಣೆಗಳನ್ನು ಅವಕಾಶಗಳನ್ನು ತಿಳಿಯಬೇಕು. ಜನರು ಸಮಸ್ಯೆಯೆಂದು ನೋಡದೆ ಜನರೇ ಸಂಪನ್ಮೂಲವೆಂದು ನೋಡುವುದು ಒಳ್ಳೆಯದು.

## ಗ್ರಾಮದಲ್ಲಿ ಹಮ್ಮಿಕೊಳ್ಳಬೇಕಾಗದ ಕಾರ್ಯಕ್ರಮದ ಬಗ್ಗೆ :-

ಪ್ರತಿ ಗ್ರಾಮದಲ್ಲಿ 4 ಜನ ಪ್ರಮುಖರ ತಂಡವು 4 ದಿನಗಳ ಕಾಲ ಕಾರ್ಯನಿರ್ವಹಿಸಬೇಕಾಗುತ್ತದೆ. ಈ ನಾಲ್ಕು ದಿನಗಳು ವಸತಿ ಸಹಿತವಾಗಿದ್ದು ಪಿ.ಆರ್.ಎ. ಮಾಡಬೇಕಾಗುತ್ತದೆ.

## ಪಿ.ಆರ್.ಎ. ಎಂದರೇನು? what is PRA?

P.R.A Praticipatory Rural Appraisal • ( ಗ್ರಾಮೀಣ ಜನರೇ ಭಾಗವಹಿಸಿ ಗುಣಾತ್ಮಕವಾಗಿ ಅಂದಾಜಿಸುವುದು ಅಥವಾ ಬೆಲೆಕಟ್ಟುವುದು) ಎಂದು ಕರೆಯಲಾಗುತ್ತದೆ.

ಜನರಿಂದಲೇ ಗ್ರಾಮದ ಸ್ಥಿತಿಗತಿಯ ನೈಜ ಚಿತ್ರಣವನ್ನು ಪ್ರತಿಬಿಂಬಿಸುವಂತೆ ಮಾಹಿತಿಯನ್ನು ಸಂಗ್ರಹಿಸುವುದು ಹಾಗೂ ಜನರಿಂದಲೇ ಸಮಸ್ಯೆಗಳ ಬಗ್ಗೆ ಅಥವಾ ಗ್ರಾಮದ ಅಭಿವೃದ್ಧಿಯ ಬಗ್ಗೆ ಜನರಿಂದಲೇ ಒಳಗೊಂಡಂತೆ ಸೂಕ್ತ ಮಾರ್ಗೋಪಾಯಗಳನ್ನು ಕಂಡುಹಿಡಿದು ಕಾರ್ಯ ಪ್ರವೃತ್ತರನ್ನಾಗಿ ಮಾಡುವುದೇ ಆಗಿರುತ್ತದೆ. ಇದನ್ನು ಜನರಿಂದಲೇ ಜನರಿಗಾಗಿ ಜನರಿಗೋಸ್ಕರ ಜನರೆ ಮಾಡುವ ವಿಧಾನ ಎನ್ನಬಹುದು.

## ಒಳ್ಳೆಯ ಪಿ.ಆರ್.ಎ.ನ ಲಕ್ಷಣಗಳು: Qualities of good PRA

1. ಜನರ ಬುದ್ಧಿವಂತಿಕೆ ಮತ್ತು ಭಾವನೆಗಳನ್ನು ಗೌರವಿಸಬೇಕು.
2. ಗ್ರಾಮದ ಸ್ಥಳ, ವೇಳೆ, ಜನರ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿರಬಾರದು.
3. ಸ್ಥಳೀಯ ಜನರ ಭಾಷೆ ಭಾವನೆಗಳಿಗೆ ತಕ್ಕಂತೆ ಸ್ಪಂದಿಸಬೇಕು.
4. ಬಡವರು ಹಾಗೂ ಮಹಿಳೆಯರು ಪಾಲ್ಗೊಳ್ಳಲು ಪ್ರೇರೇಪಿಸಬೇಕು.
5. ಜನರು ಮುಕ್ತವಾಗಿ ಮಾತನಾಡಲು ಸೂಕ್ತ ವಾತಾವರಣ ಕಲ್ಪಿಸಲು ಪ್ರಯತ್ನಿಸಬೇಕು.
6. ಸೂಕ್ತವಾದ ವಿಧಾನ ಮತ್ತು ಸಲಕರಣೆಗಳನ್ನು ಬಳಸಬೇಕು.
7. ಪ್ರತಿಯೊಂದು ವಿಷಯವನ್ನು ವಿವಿಧ ದೃಷ್ಟಿಕೋನದಿಂದ ನೋಡಬೇಕು.
8. ಜನರಿಂದಲೆ ಬಂದ ಮಾಹಿತಿ, ಸಮುದಾಯದಿಂದ ಕಲಿಯಬೇಕು. ಸಮುದಾಯವೇ ಶಿಕ್ಷಕ ಮಾಹಿತಿ ನೀಡುವವರು ಮತ್ತು ಕಾರ್ಯನಿರ್ವಹಿಸುವವರು, ಜನರೆ ಅಧಿಕಾರವನ್ನು ಹೊಂದಿರುತ್ತಾರೆ.

## ಪಿ.ಆರ್.ಎ ಮಾಡುವ ಕಾರ್ಯಕರ್ತನ ಲಕ್ಷಣಗಳು:- Person who does PRA

**1. ನಡವಳಿಕೆ:-** ಕಾರ್ಯಕರ್ತನಿಗೆ ತನ್ನ ನಡವಳಿಕೆಯಲ್ಲಿ ನಂಬಿಕೆ ಇರಬೇಕು. ಜನರಿಗೆ ಇಷ್ಟವಾಗುವ ರೀತಿಯಲ್ಲಿರಬೇಕು. ತಾಳ್ಮೆ, ಸಹನೆ, ಸಂಯಮ ಹಾಗೂ ಸ್ನೇಹ ಪರನಾಗಿ ಇರಬೇಕು.

**2. ಮನೋಭಾವ:-** ನಮ್ಮ ಮನೋಭಾವನೆಯನ್ನು ಬದಲು ಮಾಡಿಕೊಳ್ಳುವುದು ಕಷ್ಟ. ಆದರೆ ನಡವಳಿಕೆಯನ್ನು ಬದಲಾಯಿಸಿಕೊಳ್ಳಬೇಕು. ನಮ್ಮ ಭಾವನೆಗಳನ್ನು ಜನರಿಗೆ ಹೇರಲು ಪ್ರಯತ್ನಿಸಬಾರದು. ಜನರ ಭಾವನೆಗೆ ಸ್ಪಂದಿಸಬೇಕು ಮತ್ತು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕು.

**3. ಆಲಿಸುವುದು:-** ಪಿ.ಆರ್.ಎ ಪ್ರಮುಖ ಲಕ್ಷಣವೇ ಆಲಿಸುವುದು. ತಾಳ್ಮೆಯಿಂದ ಮತ್ತು ಆಸಕ್ತಿಯಿಂದ ಜನರು ಹೇಳುವುದನ್ನು ಕೇಳಬೇಕು ಇದರಿಂದ ಜನರ ವಿಶ್ವಾಸ ಪಡೆಯಬಹುದು. ಅವರಿಂದ ಪೂರ್ಣ ಮಾಹಿತಿಯನ್ನು ಪಡೆಯಬಹುದು.

**4. ಮುಕ್ತತೆ:** ಮಾಹಿತಿಯನ್ನು ಪಡೆಯುವುದರಲ್ಲಿ ಮತ್ತು ತಿಳಿಸುವುದರಲ್ಲಿ ಮುಕ್ತತೆ ಇರಬೇಕು. ಜನರ ಮಾಹಿತಿ ಒಪ್ಪಿಗೆ ಆಗದೆ ಇದ್ದರು ಅದರಿಂದಲೂ ಸಹ ಕಲಿಯಬೇಕು.

**5. ಗ್ರಹಿಸುವಿಕೆ:-** ಜನರು ತಿಳಿಸುವ ಮಾಹಿತಿಗಳು ವಿಧವಿಧವಾಗಿದ್ದರೂ ಸಹ ಅವು ಒಂದೇ ಸಂದೇಶವನ್ನು ತಿಳಿಸುತ್ತಿರುತ್ತವೆ. ಆದ್ದರಿಂದ ಸರಿಯಾಗಿ ಗ್ರಹಿಸಬೇಕು.

## ಪಿ.ಆರ್.ಎ. ಯ ವಿವಿಧ ವಿಧಾನಗಳು:

ಪಿ.ಆರ್.ಎ. ಹಮ್ಮಿಕೊಳ್ಳುವಲ್ಲಿ ಈ ಕೆಳಕಂಡ ವಿಧಾನಗಳನ್ನು ಬಳಸಬಹುದು.

| | |
|---|---|
| 1) ಗ್ರಾಮದ ಇತಿಹಾಸದ ಬಗ್ಗೆ | Time Line |
| 2) ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆ | Social and Resource Mapping |
| 3) ಋತುಮಾನ ನಕ್ಷೆ | Seasonality Diagram |
| 4) ಪೈ ನಕ್ಷೆ | Pie Diagram |
| 5) ಚಪಾತಿ ನಕ್ಷೆ | Chappati Diagram |
| 6) ಸಂಪತ್ತಿನವಾರು ಶ್ರೇಣೀಕರಣ | Wealth Ranking |
| 7) ಮ್ಯಾಟ್ರಿಕ್ಸ್ ಶ್ರೇಣಿಕರಣ | Matrix Ranking |
| 8) ಕಾಲ್ನಡಿಗೆ ನಕ್ಷೆ | Transact Walk |
| 9) ಸುಲಲಿತವಾಗಿ ಬರುವ ನಕ್ಷೆ | Flow chart |

### 1. ಗ್ರಾಮದ ಇತಿಹಾಸದ ಬಗ್ಗೆ:

ಉದ್ದೇಶ: ಗ್ರಾಮದ ಪ್ರಾರಂಭ, ಮುಖ್ಯವಾದ ಘಟನೆಗಳು, ಯಾವಾಗ ಘಟಿಸಿತು ಎಂಬುದರ ಮುಖಾಂತರ ಗ್ರಾಮದ ಬೆಳವಣಿಗೆಯನ್ನು ಹಾಗೂ ಬೆಳೆದು ಬಂದ ದಾರಿಯನ್ನು ತಿಯುವುದೇ ಇದರ ಉದ್ದೇಶ.

ಆರೋಗ್ಯಕ್ಕೆ ಸಂಬಂಧಿಸಿದಂತೆ ಮುಖ್ಯವಾಗಿ ಗ್ರಾಮದ ಪ್ರಾರಂಭದ ಮನೆಗಳು, ಜನಸಂಖ್ಯೆ, ರೋಗಗಳಿಂದ ಜನರು ಸತ್ತಿದ್ದು ತುಂಬಾ ಹೆಚ್ಚು ಕಾಯಿಲೆ ಬಂದ ವರ್ಷಗಳು. ಆರೋಗ್ಯದ ಸೇವೆಗಳು ಯಾವ ಯಾವ ವರ್ಷ ತಲುಪಿದ್ದು ಸಾರಿಗೆ ವ್ಯವಸ್ಥೆ ಮುಂತಾದವುಗಳ ಬಗ್ಗೆ ಮಾಹಿತಿಯನ್ನು ದಾಖಲಿಸಬಹುದು. ಇದರ ಮೂಲಕ ಗ್ರಾಮದ ಆರೋಗ್ಯದ ಬಗ್ಗೆ ಪೂರ್ಣ ಇತಿಹಾಸ ದೊರೆತಂತಾಗುತ್ತದೆ.

ಮಾಡುವ ವಿಧಾನ: ಗ್ರಾಮದಲ್ಲಿ ತುಂಬಾ ವಯಸ್ಸಾದವರನ್ನು ಗುರ್ತಿಸಿ, ಅವರೊಟ್ಟಿಗೆ ಬಾಂಧವ್ಯ ಬೆಳೆಸಿ ಮಾತಿಗಾರಂಬಿಸಿ ಆ ಮೂಲಕ ಮಾಹಿತಿಯನ್ನು ಸಂಗ್ರಹಿಸಬೇಕು. ಇದರಲ್ಲಿ ಮಹಿಳೆಯರನ್ನು (ವಯಸ್ಸಾದ) ಸೇರಿಸಿಕೊಳ್ಳುವುದು ತುಂಬಾ ಒಳ್ಳೆಯದು. ಕೆಲವು ನಿರ್ಧಿಷ್ಟ ವರ್ಷಗಳನ್ನು ತಿಳಿಸದಿದ್ದಾಗ ಅಂದಾಜು ತೆಗೆದುಕೊಳ್ಳಬೇಕು ಮತ್ತು ಅಲ್ಲಿ ಸೂಕ್ತ ಬದಲಾವಣೆಗಳನ್ನು (ಕ್ರಾಸ್ ಚಕ್) ಮಾಡಿ ತಿಳಿದುಕೊಳ್ಳಬೇಕು. ಚಾರ್ಟ್‌ನಲ್ಲಿ ಬರೆದುಕೊಳ್ಳಬೇಕು. ಜನರಿಂದಲೇ ಬರೆಸುವುದು ಸೂಕ್ತ. (ಪ್ರಶ್ನೆ ನಕ ವಿಚಾರಣೆ/ವಿಚಾರವಿನಿಮಯ)

ಕಂಡುಬರುವ ಅಂಶಗಳು: ಸಂಗ್ರಹಿಸಿದ ಮಾಹಿತಿಯು ಗ್ರಾಮದ ಇತಿಹಾಸ, ಕಾಯಿಲೆಗಳು ಹೆಚ್ಚಾಗಿ ಬಂದ ವರ್ಷ ಎದುರಿಸಿದ ಸ್ಥಿತಿ, ಜನರ ಬವಣೆ, ಬದಲಾವಣೆ ಮುಂತಾದವುಗಳ ಬಗ್ಗೆ ತಿಳಿಸುತ್ತದೆ

ಬೇಕಾಗಿರುವ ಸಾಮಗ್ರಿಗಳು: ಸ್ಕೆಚ್ ಪೆನ್ನು, ಚಾರ್ಟ್‌ಪೇಪರ್, ಮಾರ್ಕರ್.

## ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆ : (Social and Resource Mapping)

ಉದ್ದೇಶ:- ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆ ಎಂದರೆ ಹಳ್ಳಿಯ ಭೌತಿಕ ನಕ್ಷೆ, ಹಳ್ಳಿಯ ಗಡಿ, ರಸ್ತೆ, ದೇವಸ್ಥಾನ, ಮನೆಗಳು, ಕಚ್ಚಾ ಮನೆಗಳು, ದೀಪದ ವ್ಯವಸ್ಥೆ, ಇತ್ಯಾದಿ ಮಾಹಿತಿಗಳನ್ನು ಒಳಗೊಂಡಿರುತ್ತದೆ.

ಆರೋಗ್ಯಕ್ಕೆ ಸಂಬಂಧಿಸಿದಂತೆ ಗ್ರಾಮದಲ್ಲಿರುವ ಕುಡಿಯುವ ನೀರಿನ ಮೂಲಗಳು ಕೆರೆ, ಕಟ್ಟೆ, ಬಾವಿ, ಕೊಳವೆಬಾವಿ, ಪಿ.ಹೆಚ್.ಸಿ. ಉಪಕೇಂದ್ರ ಗ್ರಾಮದಲ್ಲಿರುವ ದಾಯಿ, ನಾಟಿವೈದ್ಯರು, ಶಾಲೆ, ನಲ್ಲಿ, ತೋಪು, ಗೋಮಾಳ ಇತ್ಯಾದಿ ಒಳಗೊಂಡಿರುತ್ತದೆ.

ಮಾಡುವ ವಿಧಾನ:- ಮೊದಲಿಗೆ ಸೂಕ್ತವಾದ ಜಾಗವನ್ನು ಜನರಿಂದ ಆಯ್ದುಕೊಳ್ಳಬೇಕು ಎಲ್ಲರಿಗೂ ವೀಕ್ಷಿಸುವಂತೆ ಮತ್ತು ನಕ್ಷೆ ಬಿಡಲು ಸೂಕ್ತವಾದ ಸ್ಥಳವಿರಬೇಕು. ಮೊದಲಿಗೆ ಸೂಕ್ತವಾದ ಮಾಹಿತಿ ನೀಡಿ ಜನರೆ ನಕ್ಷೆ ಬಿಡಲು ತಿಳಿಸಬೇಕು. ಮೊದಲಿಗೆ ಸ್ವಲ್ಪ ಕಷ್ಟವಾದರು ಜನರನ್ನು ಪ್ರೇರೆಪಿಸಬೇಕು ನಂತರ ಜನರೆ ಬರೆಯುತ್ತಾರೆ. ಜನರನ್ನು ಪ್ರೋತ್ಸಾಹಿಸುತ್ತಿರಬೇಕು.

ತಪ್ಪುಗಳಿದ್ದರೆ ಜನರೆ ಚರ್ಚಿಸಿ ಸರಿಪಡಿಸಲು ತಿಳಿಸಬೇಕು. ನಮ್ಮ ವಿಚಾರಗಳನ್ನು ಹೇರಬಾರದು. ಮಹಿಳೆಯರು ಚೆನ್ನಾಗಿ ನಕ್ಷೆ ಬಿಡುವುದರಿಂದ ಅವರನ್ನು ಒಳಗೊಂಡು ನಕ್ಷೆ ಬಿಡಿಸುವುದು ಸೂಕ್ತವಾಗಿರುತ್ತದೆ. ನಂತರ ನಕ್ಷೆಗೆ ಚಿಹ್ನೆಗಳನ್ನು ಬಳಸಲು ಜನರಿಗೆ ಬಿಡಬೇಕು ಅವರೆ ನಿರ್ಧರಿಸಿ ಸೂಕ್ತವಾದ ಚಿಹ್ನೆಗಳನ್ನು ನೀಡುತ್ತಾರೆ. ನಂತರ ನಕ್ಷೆಯ ನಕಲನ್ನು ಚಾರ್ಟ್ ಪೇಪರ್‌ಗೆ ಮಾಡಿಕೊಳ್ಳಬೇಕು.

ಈ ಕೆಲಸವು ಗುಂಪಿನಲ್ಲಾಗುತ್ತದೆ. ಎಲ್ಲಾ ದೊರಕಿದ ಮಾಹಿತಿಯನ್ನು ಅಲ್ಲೆ ಸರಿಪಡಿಸಬಹುದು. ಈ ಕಾರ್ಯವು ಗುಂಪು ಚಟುವಟಿಕೆಯ ಮೂಲಕ ಮಾಡುವುದರಿಂದ ಒಗ್ಗಟ್ಟಿನಿಂದ ಮತ್ತು ಒಂದೇ ಭಾವನೆ ಮೂಡಿಸಲು ಸಾಧ್ಯವಾಗುತ್ತದೆ. ಅನಕ್ಷರಸ್ಥರು ಕೂಡ ಗುರುತಿಸುವಂತೆ ಚಿಹ್ನೆಗಳನ್ನು ಬಳಸಲಾಗಿರುತ್ತದೆ. ಈ ನಕ್ಷೆಯ ಆಧಾರದ ಮೇಲೆ ಮುಂದಿನ ಪಿ.ಆರ್.ಎ. ವಿಧಾನಗಳನ್ನು ಬಳಸಬಹುದಾಗಿದೆ.

ಹೊರ ಬರುವ ಅಂಶ:- ಈ ನಕ್ಷೆಯಿಂದ ಗ್ರಾಮ ಚಿತ್ರವು ಕಣ್ಣ ಮುಂದೆ ಬಂದಂತಾಗುತ್ತದೆ. ಮುಖ್ಯವಾಗಿ ಕುಡಿಯುವ ನೀರು ಶಾಲೆ ಅಂಗನವಾಡಿ, ರಸ್ತೆ ಹಾಗೂ ಹೆಚ್ಚು ಬಡವರು, ವಾಸಿಸುವ ಮನೆಗಳು, ಕೊಳಕಿನಿಂದ ಕೂಡಿದ ಮನೆಗಳು ಗುರ್ತಿಸಬಹುದು. ಇದರ ಮುಖಾಂತರ ಯಾವ ಮನೆಗಳಿಗೆ ಹೆಚ್ಚು ಆರೋಗ್ಯದ ಬಗ್ಗೆ ಗಮನ ನೀಡಬೇಕೆಂದು ತಿಳಿಯುತ್ತದೆ. ಗ್ರಾಮದ ಸ್ಥಿತಿಗತಿಯನ್ನು ಒಟ್ಟಾರೆ ಎಲ್ಲರು ಕಣ್ಣಿನ ಎದುರಲ್ಲೆ ನೋಡಿದಂತಾಗುತ್ತದೆ.

ಬೇಕಾಗಿರುವ ಸಾಮಗ್ರಿಗಳು: ಬಣ್ಣದ ಪುಡಿ, ರಂಗೋಲಿ, ಚಾರ್ಟ್‌ಪೇಪರ್, ಸ್ಕೆಚ್ ಪೆನ್ ಮಾರ್ಕರ್, ಸ್ಥಳೀಯವಾಗಿ ಸಿಗುವ ವಸ್ತುಗಳು.

## ಋತುಮಾನ ನಕ್ಷೆ: (Seasonality Diagram)

ಉದ್ದೇಶ: ಜನರ ಜೀನವದಲ್ಲಿ ದಿನ ನಿತ್ಯದ ಕೆಲಸ ಕಾರ್ಯಗಳು ಅದರಲ್ಲೂ ಗ್ರಾಮೀಣ ಪ್ರದೇಶದ ರೈತಾಪಿ ವರ್ಗದ ಕೆಲಸ ಕಾರ್ಯಗಳು, ಬದುಕು, ಪ್ರಕೃತಿಯ ವಾತಾವರಣದ ಮೇಲೆ ಅವಲಂಬಿತವಾಗಿರುತ್ತದೆ.

ಕೆಲವು ರೋಗಗಳು ಸಹ ಕೆಲವು ಮಾಹೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಅದು ತಿಳಿದರೆ ಮುಂಜಾಗ್ರತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಹಾಯವಾಗುತ್ತವೆ.

ವಿಧಾನ: ಜನರಲ್ಲಿ ಸೂಕ್ತ ಮಾಹಿತಿಯನ್ನು ನೀಡಿ ನಂತರ ಅವರಿಂದಲೇ ಈ ನಕ್ಷೆಯನ್ನು ಮಾಡಿಸಬೇಕಾಗುತ್ತದೆ. ನೆಲದ ಮೇಲೆ 12 ತಿಂಗಳುಗಳನ್ನು ಬರೆದು ನಮಗೆ ಬೇಕಾದ ವಿಷಯಗಳ ಮೇಲೆ ಜನರಿಂದಲೇ ನಕ್ಷೆಯನ್ನು ಬಿಡಿಸಲು ತಿಳಸಬೇಕು. ತಿಂಗಳುಗಳನ್ನು ಸ್ಥಳೀಯ ಜನರ ವಾಡಿಕೆಯಂತೆ ಗುರುತಿಸುವುದು ಒಳ್ಳೆಯದು.

ರೋಗಗಳ ಬಗ್ಗೆ ವಿಷಯ ತಿಳಿಯಲು ಯಾವ ರೋಗ ಯಾವ ಮಾಹೆಯಲ್ಲಿ ಹೆಚ್ಚು, ಯಾವ ಮಾಹೆಯಲ್ಲಿ ಕಡಿಮೆ ಎಂದು ತಿಳಿಸಿದರೆ ಆ ಮಾಹೆಯಲ್ಲಿ ಅವರದೇ ಆದ ಚಿಹ್ನೆಯ ಮೂಲಕ ಗುರ್ತಿಸಲು ತಿಳಿಸಬೇಕು. ಇದೇ ರೀತಿ ನಮಗೆ ಬೇಕಾದ ಮಾಹಿತಿಯನ್ನು ಪಡೆದ ಮೇಲೆ ಚಾರ್ಟ್ ಪೇಪರ್‌ಗೆ ವರ್ಗಾವಣೆ ಮಾಡಿಕೊಳ್ಳಬೇಕು.

ಹೊರ ಬಂದ ಅಂಶಗಳು: ಯಾವ ಮಾಹೆಯಲ್ಲಿ ಮಳೆ ಜಾಸ್ತಿ, ಕಡಿಮೆ, ಕೆಲಸದ ಅವಧಿ ಯಾವಾಗ, ಬಿಡುವಿನ ವೇಳೆ ಯಾವಾಗ, ಹಬ್ಬ ಹರಿದಿನಗಳು ಯಾವಾಗ, ರೋಗಳು ಬರುವ ಕಾಲ, ಹೆಚ್ಚಾಗಿ ಬರುವ ಕಾಲ, ಮುಂತಾದವುಗಳಿಂದ ಗ್ರಾಮದಲ್ಲಿ ಮುಂಜಾಗ್ರತಾ ಕ್ರಮವಾಗಿ ಹಾಗೂ ಯೋಜನೆಯನ್ನು ಮಾಡಲು ಇದು ಸಹಾಯಕವಾಗುತ್ತದೆ.

ಬೇಕಾಗುವ ಸಾಮಾಗ್ರಿಗಳು: ಬಣ್ಣದ ಪುಡಿ, ರಂಗೋಲೆ, ಸ್ಕೆಚ್ ಪೆನ್ನು, ಚಾರ್ಟ್ ಪೇಪರ್, ಮಾರ್ಕರ್, ಸ್ಥಳೀಯವಾಗಿ ಸಿಗುವ ವಸ್ತುಗಳು.

## ಪೈ ನಕ್ಷೆ: (Pie Diagram)

ಉದ್ದೇಶ: ಪೈ ನಕ್ಷೆ ತುಂಬಾ ಉಪಯುಕ್ತವಾದ ನಕ್ಷೆ. ಇದರಿಂದ ಒಂದು ವಿಷಯದ ಬಗ್ಗೆ ಅನುಪಾತದ ರೀತಿಯಲ್ಲಿ ವಿಷಯದ ಬಗ್ಗೆ ಇರುವ ಸ್ಥಿತಿಯನ್ನು ಸ್ಪಷ್ಟವಾಗಿ ತಿಳಿಯಬಹುದು. ಮುಖ್ಯವಾಗಿ ಗ್ರಾಮದಲ್ಲಿರುವ ಜನರು ಯಾವ ಯಾವ ಬಾಪ್ತಿಗೆ ಎಷ್ಟು ಹಣ ಖರ್ಚು ಮಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು.

ವಿಧಾನ: ಈ ನಕ್ಷೆ ಯನ್ನು ಸ್ಥಳೀಯವಾಗಿಯೆ ಮಾಡಬಹುದು. ಜನರಲ್ಲಿ ಸೂಕ್ತ ಮಾಹಿತಿ ನೀಡಿ ಗ್ರಾಮದಲ್ಲಿರುವ ವಿಷಯಗಳ ಆಧಾರದ ಮೇಲೆಯೇ ನಕ್ಷೆ ಮಾಡಲು ಹೇಳಿ ಕೆಲವು ಕಡ್ಡಿಗಳನ್ನು ಬಳಸಿ ಅಥವಾ ಜನರಿಂದ ಮಾಹಿತಿಯನ್ನು ಪಡೆದು ಅದನ್ನು ಶೇ. 100ಕ್ಕೆ ಪರಿವರ್ತಿಸಿಕೊಂಡು ಅದನ್ನು 360 ಡಿಗ್ರಿಗೆ ಬದಲಾಯಿಸಿಕೊಂಡು ಸಹ ಮಾಡಬಹುದಾಗಿರುತ್ತದೆ. ಇದನ್ನು ಸಹ ನೆಲದಲ್ಲಿ ಮಾಡಬಹುದು ಚಾರ್ಟ್‌ನಲ್ಲೂ ಸಹ ಮಾಡಬಹುದಾಗಿರುತ್ತದೆ ನಕಲನ್ನು ಮಾಡಿಕೊಳ್ಳಬೇಕು. ಈ ನಕ್ಷೆಯನ್ನು ಒಟ್ಟಾರೆ ಗ್ರಾಮಕ್ಕೊಂದು ಗುರುತಿಸಿದ ಬಡವರಲ್ಲೊಂದು ಮಾಡಬೇಕು

ಹೊರಬರುವ ಅಂಶಗಳು: ಈ ನಕ್ಷೆಯನ್ನು ಅಕ್ಷರಸ್ಥರು, ಅನಕ್ಷರಸ್ಥರು ಮಾಡಬಹುದಾಗಿರುತ್ತದೆ. ಮತ್ತು ಯಾವ ಯಾವ ವಿಷಯಕ್ಕೆ ಎಷ್ಟೆಷ್ಟು ಖರ್ಚು ಮಾಡುತ್ತಾರೆ ಎಂಬುದು ಅನುಪಾತದೊಂದಿಗೆ ತದರ ಪ್ರಾಮುಖ್ಯತೆ ತಿಳಿಯುತ್ತದೆ.

ಬೇಕಾಗಿರುವ ಸಾಮಗ್ರಿಗಳು:- ಚಾರ್ಟ್ ಪೇಪರ್, ಮಾರ್ಕರ್, ಸ್ಕೆಚ್‌ಪೆನ್, ವೃತ್ತಾಕಾರದ ಪ್ಲೇಟ್ ಅಥವಾ ಇತರೆ ಪೆನ್ಸಿಲ್.

## ಚಪಾತಿ ನಕ್ಷೆ: (Chappati Diagram)

ಈ ನಕ್ಷೆಯನ್ನು ಬಿಡಿಸುವಾಗ ದುಂಡಗಿನ ಮಾದರಿಯಲ್ಲಿ ಚಿತ್ರಿಸುವುದರಿಂದ ಇದನ್ನು ಚಪಾತಿ ನಕ್ಷೆ ಎಂದು ಕರೆಯುತ್ತಾರೆ ಹಾಗೂ ಇದನ್ನು ವೆನ್ ನಕ್ಷೆ ಎಂತಲೂ ಕರೆಯುತ್ತಾರೆ.

ಉದ್ದೇಶ:- ಇದನ್ನು ಗ್ರಾಮದಲ್ಲಿರುವ ಆರೋಗ್ಯ ಸೇವೆಗಳ ಬಗ್ಗೆ ಅದು ಜನರಿಂದ ಇರುವ ಅಂತರದ ಬಗ್ಗೆ ಹಾಗೂ ಅದರಿಂದ ಸಿಗುತ್ತಿರುವ ಸೇವೆಯ ಬಗ್ಗೆ ಹಾಗೂ ತಗಲುವ ವೆಚ್ಚದ ಬಗ್ಗೆಯೂ ಸಹ ಮಾಡಬಹುದು ಇದರಿಂದ ಜನರಿಗೆ ಪ್ರತಿಯೊಂದರಿಂದ ಸಿಗುವ ಸೇವೆ ಮತ್ತು ವ್ಯತ್ಯಾಸವು ತಿಳಿಯುತ್ತದೆ.

ವಿಧಾನ:- ಜನರನ್ನು ಒಂದು ಕಡೆ ಕಲೆ ಹಾಕಿ ಸೂಕ್ತ ಮಾಹಿತಿಯನ್ನು ನೀಡಬೇಕು ನಂತರ ಗ್ರಾಮದಲ್ಲಿರುವ ಅಥವಾ ಜನರು ಪಡೆಯುತ್ತಿರುವ ಆರೋಗ್ಯ ಸೇವೆಗಳು ಮತ್ತು ಅವುಗಳನ್ನು ಬಳಸಿ ದೊರಕುವ ಸೇವೆಯ ಬಗ್ಗೆ ಜನರಿಂದ ಅದರ ಗಾತ್ರ ಮತ್ತು ಅಂತರದಂತೆ ವೃತ್ತಗಳನ್ನು ಹಾಳೆಯ ಮೇಲೆ ಇಡಲು ತಿಳಿಸಿ. ಅದನ್ನು ಅಂಟಿಸಿದರೂ ಆಯಿತು. ಹಾಗೆಯೇ ಇವುಗಳಿಂದ ಸಿಗುವ ಸೇವೆ ಗಾತ್ರ ತಗಲುವ ವೆಚ್ಚದ ಬಗ್ಗೆಯೂ ಸಹ ಇದೆ ಈ ರೀತಿ ಮಾಡಬಹುದಾಗಿರುತ್ತದೆ. ಇದನ್ನು ನೆಲದ ಮೇಲೂ ಸಹ ಮಾಡಬಹುದಾಗಿರುತ್ತದೆ.

ಹೊರಬರುವ ಅಂಶಗಳು: ವಿವಿಧ ಸೇವೆಗಳು ಜನರಿಗೆ ದೊರೆಯುವ ಪ್ರಮಾಣ, ಜನರಿಂದ ಇರುವ ದೂರ ಹಾಗೂ ಒಂದಕ್ಕೊಂದು ತಗಲುವ ವೆಚ್ಚದ ಬಗ್ಗೆ ತಿಳಿಯುತ್ತದೆ. ನಿಖರವಾಗಿ ಅಂಕಿ ಅಂಶದಂತೆ ಅಲ್ಲದಿದ್ದರೂ ಸಹ ಸೂಕ್ತ ಪ್ರಮಾಣದಲ್ಲಿ ಮಾಹಿತಿ ಸಿಗುತ್ತದೆ. ಮುಂದಿನ ಯೋಜನೆ ಮಾಡಬೇಕಾದಲ್ಲಿ ಇದು ತುಂಬಾ ಸಹಕಾರಿಯಾಗುತ್ತದೆ.

ಬೇಕಾಗಿರುವ ವಸ್ತುಗಳು: ಚಾರ್ಟ್ ಪೇಪರ್, ಸ್ಕೆಚ್‌ಪೆನ್, ಮಾರ್ಕರ್ ವಿವಿಧ ಆಕಾರದ ಬಣ್ಣಬಣ್ಣದ ವೃತ್ತಗಳು (ಚಾರ್ಟ್ ಪೇಪರ್‌ನಿಂದ ಮಾಡಿದ್ದು). ರಂಗೋಲಿ ಪುಡಿ ಬಣ್ಣದ ಪುಡಿ.

## ಸಂಪತ್ತಿನವಾರು ಶ್ರೇಣಿಕರಣ: (Wealth Ranking)

ಉದ್ದೇಶ:- ಇದು ಒಂದು ಗ್ರಾಮದಲ್ಲಿ ಇರುವ ಕುಟುಂಬಗಳನ್ನು ಆರ್ಥಿಕ ಸ್ಥಿತಿಗತಿಯ ಆಧಾರದ ಮೇಲೆ ವಿಂಗಡಿಸುವುದೇ ಆಗಿದೆ. ಏಕೆಂದರೆ ಗ್ರಾಮದ ಎಲ್ಲಾ ಜನರ ಆರ್ಥಿಕ ಸ್ಥಿತಿ ಒಂದೇ ತೆರವಾಗಿರುವುದಿಲ್ಲವಾದ್ದರಿಂದ ಅವರ ಬೇಡಿಕೆ ಪೂರೈಕೆಯ ಸ್ಥಿತಿಯು ಸಹ ಭಿನ್ನವಾಗಿರುತ್ತದೆ. ಆದ್ದರಿಂದ ಇದನ್ನು ಮನಗಾಣಲು ಇದು ತುಂಬಾ ಸಹಕಾರಿಯಾಗಲಿದೆ.

ವಿಧಾನ: ಇದನ್ನು ಎರಡು ವಿಧಾನದಲ್ಲಿ ಮಾಡುವ ಅವಕಾಶವಿರುತ್ತದೆ. ಮೊದಲನೆಯದು ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆ ಮಾಡುವಾಗಲೆ ಮನೆಗಳನ್ನು ಗುರ್ತಿಸಿ ಚೀಟಿಯಲ್ಲಿ ಕುಟುಂಬದ ಮುಖ್ಯಸ್ಥರ ಹೆಸರನ್ನು ಬರೆದು ಆ ಚೀಟಿಗಳನ್ನು ಜನರಿಗೆ ಕೊಟ್ಟು ಚರ್ಚಿಸಲು ತಿಳಿಸಿ. ಶ್ರೀಮಂತ, ಮಧ್ಯಮ, ಬಡವ, ಅತಿಬಡವರು ಎಂದು ವರ್ಗೀಕರಿಸಿ ಕೊಡಿ ಎಂದು ಸೂಕ್ತ ಮಾಹಿತಿ ನೀಡಿದರೆ ಜನರೆ ಇದನ್ನು ಮಾಡುತ್ತಾರೆ. ನಂತರ ಅದಕ್ಕನುಸಾರವಾಗಿ ಪಟ್ಟಿ ಮಾಡುವುದು. ಅದನ್ನು ಪುನಃ ಕೆಲವರಿಂದ ಪರಿಶೀಲಿಸಿ ಸರಿ ಎಂದು ಕಂಡು ಬಂದರೆ ಅದರಂತೆ ವರ್ಗೀಕರಿಸುವುದು.

ಹೊರಬರುವ ಅಂಶಗಳು:- ಈ ವಿಧಾನದಿಂದ ನಿಜವಾದ ಬಡ ಜನರನ್ನು, ಅತಿ ಬಡವರನ್ನು ಗುರ್ತಿಸುವುದು ಸಾಧ್ಯವಾಗುತ್ತದೆ. ಯಾರಿಗೆ ಯಾವ ಯೋಜನೆ ಸೂಕ್ತವೆಂದು ನಿರ್ಧರಿಸಲು ಸಹಕಾಯಕವಾಗುತ್ತದೆ. ಅರ್ಹ ಬಡಜನರಿಗೆ ಕಾರ್ಯಕ್ರಮಗಳನ್ನು ಮೊದಲಿಗೆ ತಲುಪಿಸಲು ಗುರ್ತಿಸಿದಂತಾಗುತ್ತದೆ.

ಬೇಕಾಗುವ ಸಾಮಗ್ರಿಗಳು:- ಸ್ಕೆಚ್ ಪೆನ್, ಚಾರ್ಟ್ ಪೇಪರ್ 2 X 3 ಅಳತೆಯ ಬಿಳಿಹಾಳೆ ಪೇಪರ್‌ಗಳು ಅವಶ್ಯವಿದ್ದಷ್ಟು.

## ಮ್ಯಾಟ್ರಿಕ್ಸ್ ಶ್ರೇಣಿಕರಣ: (Matrix Ranking)

ಮ್ಯಾಟ್ರಿಕ್ಸ್ ಶ್ರೇಣಿಕರಣ ಒಂದು ಗುಂಪು ಚಟುವಟಿಕೆ. ಸಮುದಾಯದಲ್ಲಿ ಕಾರ್ಯ ನಿರ್ವಹಿಸುವ ವಿವಿಧ ಸಂಸ್ಥೆ, ಸೇವೆ, ತಗಲುವ ವೆಚ್ಚ, ಜನರಿಗೆ ಹತ್ತಿರವೆನಿಸಿದ್ದು, ಜನರಿಗೆ ಉತ್ತಮ ಸೇವೆ ದೊರೆಯುತ್ತಿರುವುದು ಮುಂತಾದ ನಮಗೆ ಆಯ್ಕೆ ಮಾಡಿಕೊಂಡ ಒಂದು ವಿಷಯದ ಬಗ್ಗೆ ತುಲನಾತ್ಮಕವಾದ ಮಾಹಿತಿಯನ್ನು ಪಡೆಯುವುದು ಮತ್ತು ಒಂದಕ್ಕಿಂತ ಮತ್ತೊಂದರ ಬಗ್ಗೆ ಸೂಕ್ತವಾದ ರೀತಿಯಲ್ಲಿ ತುಲನೆ ಮಾಡುವುದು ಇದರ ಪ್ರಮುಖ ಉದ್ದೇಶವಾಗಿರುತ್ತದೆ.

ವಿಧಾನ: ಜನರನ್ನು ಗುಂಪು ಸೇರಿದ ನಂತರ ಸೂಕ್ತ ಮಾಹಿತಿಯನ್ನು ನೀಡಿ ಜನರಿಗೆ ಆರೋಗ್ಯದ ಸೇವೆಗಳನ್ನು ನೀಡುತ್ತಿರುವ ಸಂಸ್ಥೆ. ವ್ಯಕ್ತಿಗಳ ಪಟ್ಟಿ ಮಾಡಲು ತಿಳಿಸುವುದು ಉದಾ: ನಾಟಿವೈದ್ಯ, ಎ. ಎನ್. ಎಂ. ಅಂಗನವಾಡಿ ಕಾರ್ಯಕರ್ತೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಉಪಕೇಂದ್ರ ತಾಲ್ಲೂಕು ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ ಮತ್ತು ಖಾಸಗಿ ನರ್ಸಿಂಗ್ ಹೊಂ, ಇತ್ಯಾದಿ ಇವುಗಳಲ್ಲಿ ದೊರೆಯುವ ಸೇವೆ ವೆಚ್ಚ, ಸೌಲಭ್ಯಗಳ ಲಭ್ಯತೆ, ವ್ಯಕ್ತಿಗಳ ಲಭ್ಯತೆ ಇತ್ಯಾದಿಗಳ ಬಗ್ಗೆ ಕೇಳಿ 0 ಯಿಂದ 10ರ ಮಾದರಿಯಲ್ಲಿ ಅಂಕಗಳನ್ನು ನೀಡಿದಾಗ ಯಾವುದು ಹೆಚ್ಚು ಅಂಕಗಳನ್ನು ಗಳಿಸುತ್ತದೆ ಅದು ಜನರಲ್ಲಿ ಹೆಚ್ಚು ನಂಬಿಕೆಯನ್ನು ಹೊಂದಿದ್ದು ಜನರಿಗೆ ಅನುಕೂಲವಾಗುತ್ತಿರುತ್ತದೆ.

ಹೊರಬರುವ ಅಂಶಗಳು: ಸಮುದಾಯ ಯಾವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದೆ ಎಂಬುದರ ಬಗ್ಗೆ ಸೂಕ್ತ ಮಾಹಿತಿ ಸಿಗುತ್ತದೆ ಮತ್ತು ಕಾರಣ ಸಿಗುತ್ತದೆ ಹಾಗೂ ಯಾವುದು ನಿಜವಾಗಿಯೂ ಜನರಿಗೆ ಹೆಚ್ಚು ಹತ್ತಿರ ಬೇಕಾಗುತ್ತದೆ ಎಂಬು ತಿಳಿಯುತ್ತದೆ

ಬೇಕಾಗುವ ಸಾಮಗ್ರಿಗಳು:- ಚಾರ್ಟ್ ಪೇಪರ್, ಸ್ಕೆಚ್ ಪೆನ್, ಮಾರ್ಕರ್.

## ಕಾಲ್ನಡಿಗೆ ನಕ್ಷೆ (Transact Walk)

ಉದ್ದೇಶ:- ಗ್ರಾಮದಲ್ಲಿ ಕಾಲ್ನಡಿಗೆ ಮುಖಾಂತರ ಸಾಗಿ ಗ್ರಾಮದ ಪರಿಸ್ಥಿತಿ, ನೈರ್ಮಲ್ಯದ ಬಗ್ಗೆ ಕಣ್ಣಾರೆ ನೋಡುವುದಕ್ಕಾಗಿ. ಕಾಲ್ನಡಿಗೆ ಮಾಡಿ ನಕ್ಷೆಯನ್ನು ಗುರ್ತಿಸಲಾಗುತ್ತದೆ.

ವಿಧಾನ:- ಗ್ರಾಮದ ಮುಖಂಡರು, ಜನರು ಸೇರಿಕೊಂಡು ಗ್ರಾಮದ ರಸ್ತೆಗಳಲ್ಲಿ ಸಂಚರಿಸಿ ರಸ್ತೆಗಳ ಅಕ್ಕ ಪಕ್ಕದಲ್ಲಿ ಇರುವ ಸ್ಥಿತಿಯನ್ನು ಕಣ್ಣಾರೆ ಕಂಡು ಅದನ್ನು ದಾಖಲಿಸಿಕೊಳ್ಳುವುದು.

ಗ್ರಾಮದ ನಕ್ಷೆಯಲ್ಲಿ ಇದನ್ನು ಗುರುತಿಸಿಕೊಳ್ಳುವುದು. ಗ್ರಾಮದ ರಸ್ತೆಗಳ ನೈರ್ಮಲ್ಯ, ಮಲಮೂತ್ರ ವಿಸರ್ಜನೆ ಸ್ಥಳಗಳ ಹಾಗೂ ಜಮೀನಿನ ಬಗ್ಗೆ, ಇತ್ಯಾದಿ.

ಹೊರ ಬಂದ ಅಂಶಗಳು:

ಯಾವ ರಸ್ತೆಗಳು ಹದಗೆಟ್ಟಿವೆ, ಅನೈರ್ಮಲ್ಯದ ತಾಣ ಯಾವುದು? ಅದಕ್ಕೆ ಏನು ಮಾಡಬೇಕೆಂಬುದು ತಿಳಿಯುತ್ತದೆ.

ಬೇಕಾಗಿರುವ ವಸ್ತುಗಳು:

ಚಾರ್ಟ್ ಪೇಪರ್, ಸ್ಕೆಚ್ ಪೆನ್ನು

## ಸುಲಲಿತವಾಗಿ ಬರುವ ನಕ್ಷೆ: (Flow Chart)

**ಉದ್ದೇಶ:** ಒಂದು ಕಾಯಿಲೆಯ ಬಗ್ಗೆ ಆದರ ಹಿಂದಿನ ಮುಂದಿನ ಅಂಶಗಳು ಅಂದರೆ ಒಂದು ಕಾಯಿಲೆ ಬರಲು ಕಾರಣಗಳು ಯಾವುವು. ಯಾವುದರಿಂದ ಯಾವುದು ಬರುತ್ತದೆ ಅದನ್ನು ಪರಿಹರಿಸಲು ಇರುವ ಮಾರ್ಗೋಪಾಯಗಳನ್ನು ಕಂಡು ಹಿಡಿಯ ಬಹುದಾಗಿದೆ.

ವಿಧಾನ: ಜನರ ಗುಂಪಿನಲ್ಲಿ ಮಾಡುವ ಒಂದು ಕ್ರಮ ಇದ್ದು ಜನರಿಂದ ಒಂದು ಸಮಸ್ಯೆಯನ್ನು ತೆಗೆದುಕೊಂಡು ಅದರ ಕಾರಣಗಳನ್ನು ಹುಡುಕುತ್ತಾ ಹೋಗುವುದು. ಅದನ್ನು ಒಂದು ಚಾರ್ಟ್‌ನಲ್ಲಿ ಬರೆಯುತ್ತಿರಬೇಕು. ಒಂದಕ್ಕೊಂದು ಸಂಬಂಧಿಸಿದಂತೆ ಗುರ್ತಿಸಬೇಕು ಪ್ರಮುಖ ಸಮಸ್ಯೆಯನ್ನು ಕೇಂದ್ರ ಸ್ಥಾನದಲ್ಲಿ ಬರೆದು ಅದನ್ನು ಸಮಸ್ಯೆಗಳ ಬಗ್ಗೆ ಕೆದಕುತ್ತಾ ಹೋದಂತೆ ಬರೆಯುತ್ತಾ ಹೋಗಬೇಕು. ಮುಕ್ತಾಯವಾದಾಗ ಇದರಿಂದ ಸಮುದಾಯ ಸಮಸ್ಯೆಗಳನ್ನು ಬಿಡಿಸಲು ಮಾರ್ಗೋಪಾಯಗಳನ್ನು ಹುಡುಕಲು ಸೂಕ್ತವಾಗುತ್ತದೆ.

**ಹೊರ ಬರುವ ಅಂಶಗಳು:-** ಸಮಸ್ಯೆಯ ಮೂಲ ಕಾರಣ ಅದರ ಪ್ರಮುಖ ಕಾರಣಗಳು ಗೊತ್ತಾಗುತ್ತದೆ. ಇದಕ್ಕಾಗಿ ನಿರ್ಧಿಷ್ಟವಾಗಿ ಯಾವ ಯೋಜನೆ ಹಮ್ಮಿಕೊಳ್ಳಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ಸಿಗುತ್ತದೆ.

**ಬೇಕಾಗಿರುವ ವಸ್ತುಗಳು :-** ಚಾರ್ಟ ಪೇಪರ್, ಸ್ಕೆಚ್ ಪೆನ್ ಮಾರ್ಕರ್.

**ಸಮೀಕ್ಷೆ:-**

ಸಮೀಕ್ಷೆ ಪಿ.ಆರ್.ಎ ಯ ಒಂದು ಭಾಗವಲ್ಲ. ಆದರೆ ಕಾರ್ಯಕ್ರಮದ ಹಿತದೃಷ್ಟಿಯಿಂದ ಸಮೀಕ್ಷೆಯನ್ನು ಅಳವಡಿಸಿಕೊಳ್ಳಲಾಗಿದೆ. ಮನೆ ಮನೆ ಸಮೀಕ್ಷೆ ಮಾಡುವುದು, ಗ್ರಾಮದ ಜನರನ್ನು ಬಳಸಿಕೊಂಡು ಮಾಡುವುದರಿಂದ ಇದು ಮಾಹಿತಿ ಸಂಗ್ರಹಣೆಯಲ್ಲಿ ಮಹಿಳೆಯರು ಮತ್ತು ಮಕ್ಕಳೊಂದಿಗೆ ಸಂವಾದಿಸುವುದು ಮತ್ತು ವಿಶೇಷವಾಗಿ ಮಹಿಳೆಯರ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಮುಖಾಮುಖಿ ಚರ್ಚಿಸಿ ಅವರ ಸಮಸ್ಯೆ ಅರಿಯಲು ಹೆಚ್ಚು ಸಹಾಯಕವಾಗಲಿದೆ.

ಇದರಿಂದ ಸಮರ್ಪಕವಾದ ಲಸಿಕೆ ಕಾರ್ಯಕ್ರಮ, ಸಂತಾನಹರಣ ಚಿಕಿತ್ಸೆ ಹಾಗೂ ಆರೋಗ್ಯದ ವೆಚ್ಚ ಇವೆ ಮುಂತಾದವುಗಳ ಬಗ್ಗೆ ಸಮರ್ಪಕ ಮಾಹಿತಿ ದೊರೆಯುತ್ತದೆ.

******

To Recording

## ದಾಖಲೀಕರಣದ ಬಗ್ಗೆ

ಪ್ರತಿಯೊಂದು ಗ್ರಾಮದಲ್ಲೂ ಅವರು ಮಾಡಿದ ಪಿ.ಆರ್.ಎ ಮತ್ತು ಸೂಕ್ಷ್ಮ ಯೋಜನೆಯ ದಾಖಲೀಕರಣ ಅತಿ ಮುಖ್ಯವಾದ ಮತ್ತು ಮಾಡಲೇಬೇಕಾದ ಕೆಲಸವಾಗಿರುತ್ತದೆ. ಪ್ರತಿಯೊಂದು ತಂಡವು ತಾವು ಕೆಲಸ ನಿರ್ವಹಿಸಿದ ಗ್ರಾಮಗಳಲ್ಲಿ ಈ ಕೆಳಕಂಡಂತೆ ದಾಖಲೆಗಳನ್ನು ಮಾಡಬೇಕಾಗಿರುತ್ತದೆ.

| ಕ್ರ.ಸಂ | ವಿಷಯಗಳು | ದೊಡ್ಡ ಚಾರ್ಟ್ (ಗ್ರಾಮ ಸಭೆಗಾಗಿ ಮತ್ತು ಪ್ರದರ್ಶನಕ್ಕಾಗಿ | ಚಿಕ್ಕ ಚಾರ್ಟ್ (ದಾಖಲಿಕರಣಕ್ಕಾಗಿ) |
|---|---|---|---|
| 01 | ಸಾಮಾಜಿಕ ಸಂಪನ್ಮೂಲ ನಕ್ಷೆ<br>ಕಂಡುಬರುವ ಅಂಶಗಳು<br>ಹೊರಬಂದ ಅಂಶಗಳು | ✓<br>✓<br>✓ | ✓<br>✓<br>✓ |
| 02 | ಸಂಪತ್ತಿನವಾರು ಶ್ರೇಣಿಕರಣ<br>ಹೊರಬಂದ ಅಂಶಗಳು | ✓<br>✓ | ✓<br>✓ |
| 03 | ಋತುಮಾನ ನಕ್ಷೆ<br>ಕಂಡುಬಂದ ಅಂಶಗಳು<br>ಹೊರಬಂದ ಅಂಶಗಳು | ✓<br>✓<br>✓ | ✓<br>✓<br>✓ |
| 04 | ಪೈ ನಕ್ಷೆ ಕಂಡು ಬಂದ ಅಂಶಗಳು<br>ಹೊರಬಂದ ಅಂಶಗಳು | ✓<br>✓ | ✓<br>✓ |
| 05 | ಚಪಾತಿ ನಕ್ಷೆ ಕಂಡು ಬಂದ ಅಂಶಗಳು<br>ಹೊರಬಂದ ಅಂಶಗಳು | ✓<br>✓ | ✓<br>✓ |
| 06 | ಗ್ರಾಮ ಇತಿಹಾಸದ ಬಗ್ಗೆ<br>ಹೊರಬಂದ ಅಂಶಗಳು | ✓<br>✓ | ✓<br>✓ |
| 07 | ಮ್ಯಾಟ್ರಿಕ್ ಶ್ರೇಣಿಕರಣ<br>ಕಂಡು ಬಂದ ಅಂಶಗಳು | ✓<br>✓ | ✓<br>✓ |
| 08 | ಫ್ಲೋ ಚಾರ್ಟ್<br>ಕಂಡು ಬಂದ ಅಂಶಗಳು<br>ಹೊರ ಬಂದ ಅಂಶಗಳು | ✓<br>✓<br>✓ | ✓<br>✓<br>✓ |
| 09 | ಕಾಲ್ನಡಿಗೆ ನಕ್ಷೆ<br>ಕಂಡುಬಂದ ಅಂಶಗಳು<br>ಹೊರಬಂದ ಅಂಶಗಳು | ✓<br>✓<br>✓ | ✓<br>✓<br>✓ |
| 10 | ಸಮೀಕ್ಷೆಯಿಂದ ಕಂಡುಬಂದ ಅಂಶ<br>ಹೊರಬಂದ ಅಂಶಗಳು<br>(ಸಮೀಕ್ಷೆಯ ಕ್ರೋಢಿಕರಣ ಪ್ರತ್ಯೇಕವಾಗಿ ಮಾಡಿಕೊಳ್ಳಬೇಕು) | ✓<br><br>✓ | ✓<br><br>✓ |
| 11 | ಒಟ್ಟಾರೆ ಹೊರಬಂದ ಅಂಶಗಳು | ✓ | ✓ |
| 12 | ಗ್ರಾಮ ಸಭೆಯಲ್ಲಿ ಮಾಡಬೇಕಾದ ಕೆಲಸಗಳು<br>ಆಧ್ಯತೆ ಮೇರೆಗೆ ಸಮಸ್ಯೆಗಳನ್ನು ಗುರ್ತಿಸುವುದು<br>ಮತ್ತು ಅದನ್ನು ಚರ್ಚಿಸುವುದು.<br>ಗ್ರಾಮಸಭೆಯ ನಡವಳಿಕೆಗಳು<br>ಗ್ರಾಮ ಆರೋಗ್ಯ ಸಮಿತಿ ರಚನೆ<br>ಗ್ರಾಮ ಸಭೆಯಲ್ಲಿ ಮಾಡಿದ ಗ್ರಾಮ ಆರೋಗ್ಯ ಕ್ರಿಯಾ ಯೋಜನೆ | ✓ | ✓<br>✓<br>✓<br>✓<br>✓ |

ಗ್ರಾಮ ಸಮೀಕ್ಷೆಯ ಕ್ರೋಢಿಕರಣ
ಗ್ರಾಮ ಸಭೆಯ ನಡವಳಿಕೆ
ಗ್ರಾಮ ಆರೋಗ್ಯ ಸಮಿತಿ ರಚನೆ ಪಟ್ಟಿ
ಪ್ರತ್ಯೇಕವಾಗಿ ಮಾಡಬೇಕು

ಉಳಿದೆಲ್ಲಾ ಕಂಡು ಬಂದ ಅಂಶಗಳು:
ಹೊರಬಂದ ಅಂಶಗಳು ಮತ್ತು ಕ್ರಿಯಾ ಯೋಜನೆ ಒಂದೇ ಪುಸ್ತಕದಲ್ಲಿರಬೇಕು

ಗ್ರಾಮ ಸಭೆಯ ನಡವಳಿಕೆಗೆ ಗ್ರಾಮ ಸಭೆಯಲ್ಲಿದ್ದವರು ಹಾಗೂ ಸಂಪನ್ಮೂಲ ವ್ಯಕ್ತಿಗಳ ಸಹಿ ಮಾಡಬೇಕು.
ಗ್ರಾಮದಲ್ಲಿ ನಾಲ್ಕು ದಿನಗಳು ಮಾಡಿದ ಕಾರ್ಯಕ್ರಮದ ಬಗ್ಗೆ ಪ್ರತ್ಯೇಕ ವರದಿಯನ್ನು (ಸಂಪನ್ಮೂಲ ವ್ಯಕ್ತಿಗಳು) ಲಗತ್ತಿಸಬೇಕು.

ಗ್ರಾಮದಲ್ಲಿ 4 ದಿನಗಳು ಮಾಡಿದ ಕಾರ್ಯಕ್ರಮದ ಬಗ್ಗೆ ಮುಖಂಡರಿಂದ ಗ್ರಾಮ ಆರೋಗ್ಯ ಸಮಿತಿಯಿಂದ ಪತ್ರಗಳನ್ನು ಪ್ರತ್ಯೇಕವಾಗಿ ಲಗತ್ತಿಸಬೇಕು.

<u>ಗ್ರಾಮ ಸಭೆಯಲ್ಲಿ ಮಾಡಬೇಕಾದ ಕೆಲಸಗಳು:</u>

ಗ್ರಾಮಸ್ಥರು ನಿಗಧಿಪಡಿಸಿದ ಸಮಯದಲ್ಲಿ ಗ್ರಾಮ ಸಭೆ ಮಾಡಬೇಕು ಗ್ರಾಮದಲ್ಲಿ ಸೂಕ್ತ ಸ್ಥಳ ಮತ್ತು ವೇಳೆಯಲ್ಲಿ 4 ದಿನ ಮಾಡಿದ ಎಲ್ಲಾ ಕೆಲಸಗಳ ಚಾರ್ಟ್ ನಕ್ಷೆಗಳನ್ನು (ದೊಡ್ಡದು) ಪ್ರದರ್ಶಿಸಬೇಕು.

ಗ್ರಾಮಸ್ಥರ ಸಮ್ಮುಖದಲ್ಲಿ ಆಧ್ಯತಾ ಮೇರೆಗೆ ಸಮಸ್ಯೆಗಳು ಮತ್ತು 4 ದಿನದ ಕಾರ್ಯಕ್ರಮಗಳಿಂದ ಹೊರಬಂದ ಅಂಶಗಳ ಆಧಾರದ ಮೇಲೆ ಚರ್ಚಿಸಿ ಗ್ರಾಮ ಸಭೆಯಲ್ಲಿ ತೀರ್ಮಾನಿಸಬೇಕು.

ಗ್ರಾಮ ಸಭೆಯಲ್ಲಿ ಗ್ರಾಮ ಆರೋಗ್ಯ ಸಮಿತಿಯನ್ನು ಗ್ರಾಮಸ್ಥರಲ್ಲಿ ಆಸಕ್ತಿಯನ್ನು ಮೂಡಿಸಿ ಸಮಿತಿಯನ್ನು ರಚಿಸಬೇಕು.
ಗ್ರಾಮ ಸಭೆಯಲ್ಲಿ ಗ್ರಾಮ ಆರೋಗ್ಯ ಕ್ರಿಯಾ ಯೋಜನೆಯನ್ನು ತಯಾರಿಸಬೇಕು.

ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ
ಬಿಳಿಗಿರಿರಂಗನಬೆಟ್ಟ
ಮತ್ತು
ಕರುಣಾಟ್ರಸ್ಟ್, ಟಿ. ನರಸೀಪುರ ಶಾಖೆ

(ನೆರವು : ವಿಶ್ವ ಆರೋಗ್ಯ ಸಂಸ್ಥೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಭಾರತ ಸರ್ಕಾರ)

## "ಗ್ರಾಮೀಣ ಬಡಜನರ ಉತ್ತಮ ಆರೋಗ್ಯಕ್ಕಾಗಿ ಸಶಕ್ತತೆ"

ಗೃಹ ಸಮೀಕ್ಷೆ ನಮೂನೆ ಸಮೀಕ್ಷೆ ದಿನಾಂಕ:
Household Survey Questionnaire

### I. ಗ್ರಾಮದ ಮಾಹಿತಿ :

1) ಗ್ರಾಮದ ಹೆಸರು .................................. ಗ್ರಾಮ ಪಂಚಾಯ್ತಿ ಹೆಸರು ..........................
2) ಪ್ರಾಥಮಿಕ ಆರೋಗ್ಯ ಕೇಂದ್ರದ ಹೆಸರು ....................
3) ಮನೆಯ ಕ್ರಮ ಸಂಖ್ಯೆ ...................... ಸ್ವಂತ / ಬಾಡಿಗೆ / ಇಲ್ಲ .........
4) ಗುಡಿಸಲು / ಹೆಂಚು / ತಾರಸಿ ........................
5) ಮನೆಯ ಮುಖ್ಯಸ್ಥರ ಹೆಸರು ............................................. ವಯಸ್ಸು ...........
6) ಅವಿಭಕ್ತ ಕುಟುಂಬವೆ .......................... ಹೌದು/ ಇಲ್ಲ ..............
7) ಜಾತಿ ................ ಎಸ್.ಸಿ./ ಎಸ್.ಟಿ / ಹಿಂದುಳಿದ ಪಂಗಡ/ ಇತರೆ .........
ಧರ್ಮ .............. ವಾರ್ಷಿಕ ಆದಾಯ ......................
8) ಕುಟುಂಬದ ಭೂ ಇಡುವಳಿ ಒಟ್ಟು..................... ತರಿ ........ ಖುಷ್ಕಿ ............ ಭಾಗಾಯ್ತು..........
9) ಕುಟುಂಬ ಒಟ್ಟು ಜನಸಂಖ್ಯೆ ......... ಗಂ ..... ಹೆ........ ಮಕ್ಕಳು ......
10) ಕುಟುಂಬದ ವಿವರ:

| ಕ್ರ ಸಂ | ಹೆಸರು | ವಯಸ್ಸು | ಲಿಂಗ | ಮುಖ್ಯಸ್ಥರೊಂದಿಗೆ ಸಂಬಂಧ | ವೈವಾಹಿಕ ಸ್ಥಿತಿ | ವಿದ್ಯಾಭ್ಯಾಸದ ಮಟ್ಟ | ವೃತ್ತಿ |
|---|---|---|---|---|---|---|---|
| | | | | | | | |

11) ಮನೆಯಲ್ಲಿ ಶೌಚಾಲಯವಿದೆಯೇ ? .............................. ಇದೆ / ಇಲ್ಲ

12) ಕುಡಿಯುವ ನೀರಿನ ಬಳಕೆ ........ ನದಿ / ಕೆರೆ/ ಬಾವಿ/ ಕೊಳವೆ ಬಾವಿ/ ನಲ್ಲಿ ಮತ್ತು ಕುಡಿಯುವ ನೀರಿನ ಮೂಲಕ್ಕೆ ಇರುವ ದೂರ ............

13) ಮನೆ ಬಳಕೆ ನೀರನ್ನು ಬಿಡುವುದು ................ ಬೀದಿಗೆ / ಬಚ್ಚಲಿಗೆ

14) ನಿಮ್ಮ ಮನೆಯಲ್ಲಿ ಕಳೆದ ಎರಡು ವರ್ಷಗಳಿಂದ ಯಾರಿಗಾದರೂ ಕಾಯಿಲೆಗಳು ಬಂದಿತ್ತೆ? ಹೌದು / ಇಲ್ಲ

15) ಬಂದಿದ್ದರೆ ಯಾವುದು? .....................

16) ಯಾರಿಗೆ? ಬಂದಿತ್ತು? .................... ಸ್ತ್ರೀಯರೇ / ಪುರುಷರೇ ............. ವಯಸ್ಸು

17) ಕಾಯಿಲೆ ಯಿಂದೇನಾದರೂ ಸಾವನಪ್ಪಿದ್ದಾರೆಯೇ? .................... ಹೌದು / ಇಲ್ಲ
ಸಾವನಪ್ಪಲು ಇತರೆ ಕಾರಣಗಳು ಇದ್ದರೆ ತಿಳಿಸಿ
..........................................................................................................................

18) ಕಾಯಿಲೆ ಬಂದಾಗ ನೀವು ಬೇಟಿ ಮಾಡುವ ವೈದ್ಯರು / ಆಸ್ಪತ್ರೆ ....................

19) ಪೋಲಿಯೋ ಪೀಡಿತ ಮಕ್ಕಳಿದ್ದಾರೆಯ? .............................. ಹೌದು / ಇಲ್ಲ ಇದ್ದರೆ ಎಷ್ಟು ಜನರು .................. ವಯಸ್ಸು ....................

20) ಕಳೆದ ಎರಡು ವರ್ಷದಲ್ಲಿ ದಡಾರ ಯಾರಿಗಾದರೂ ಬಂದಿತ್ತೆ? ಹೌದು / ಇಲ್ಲ ......

21) 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಹಿಳೆ / 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪುರುಷರಿಗೆ ಯಾರಿಗಾದರೂ ಮದುವೆ ಯಾಗಿದೆಯೇ / ಹೌದು / ಇಲ್ಲ ........................

22) ಅಂಗವಿಕಲರು ನಿಮ್ಮ ಮನೆಯಲ್ಲಿ ಇದ್ದಾರೆಯೇ?............ ಹೌದು / ಇಲ್ಲ ಇದ್ದರೆ ಯಾವ ರೀತಿ ಅಂಗವಿಕಲತೆ ................ ಹೆಸರು ...................... ವಯಸ್ಸು ............

23) ಗರ್ಭಿಣಿ ಸ್ತ್ರೀಯರು 3 ಬಾರಿ ಆಸ್ಪತ್ರೆಗೆ ಬೇಟಿ ನೀಡಿ ಪರೀಕ್ಷಿಸಿಕೊಂಡಿದ್ದಾರೆಯೇ? ಹೌದು/ ಇಲ್ಲ.

24) ಗರ್ಭಿಣಿ ಆಗಿದ್ದಾಗ ಧನುರ್ವಾಯು ಚುಚ್ಚು ಮದ್ದು ತೆಗೆದುಕೊಳ್ಳಲಾಗಿದೆಯೇ? ಹೌದು / ಇಲ್ಲ.

25) ಕಬ್ಬಿಣಾಂಶದ ಮಾತ್ರೆಗಳನ್ನು ತೆಗೆದುಕೊಳ್ಳಲಾಗಿದೆಯೇ? ಹೌದು / ಇಲ್ಲ ಇಲ್ಲವಾದರೆ ಕಾರಣ
..........................................................................................................................

26) ಹೆರಿಗೆ ಎಲ್ಲಿ ಮಾಡಿಸಲಾಗಿತ್ತು .......... ಮನೆ / ಆಸ್ಪತ್ರೆ / ದಾಯಿ / ಎ.ಎನ್.ಎಂ/ ಪಿ.ಹೆಚ್.ಸಿ/ ಖಾಸಗಿ ಆಸ್ಪತ್ರೆ/ ಇತರೆ

27) ನಿಮ್ಮ ಮಕ್ಕಳಿಗೆ ಎಲ್ಲಾ ಲಸಿಕೆಗಳನ್ನು ಕೊಡಿಸಲಾಗಿದೆಯೇ ? ಹೌದು / ಇಲ್ಲ ಎಲ್ಲಿ ಕೊಡಿಸಿರುವಿರಿ ............

28) ನಿಮ್ಮ ಮನೆಯಲ್ಲಿರುವ ಕುಟುಂಬವು ಮಕ್ಕಳಿರುವ ಕುಟುಂಬವೇ? ಹೌದು / ಇಲ್ಲ ಇದ್ದರೆ ಒಂದು/ ಎರಡು/ ಎರಡಕ್ಕಿಂತ ಹೆಚ್ಚು ಮಕ್ಕಳಿರುವ ಕುಟುಂಬವೇ?

29) ನಿಮ್ಮ ಮನೆಯಲ್ಲಿ ಮಿತ ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳಲಾಗಿದೆಯೇ? ........ ಹೌದು / ಇಲ್ಲ

30) ತಾತ್ಕಾಲಿಕ ವಿಧಾನವೇ / ಖಾಯಂ ವಿಧಾನವೇ? ...............

31) ಯಾರು ಅಳವಡಿಸಿಕೊಂಡಿದ್ದಾರೆ ? ಸ್ತ್ರೀಯರೇ / ಪುರುಷರು? ........................

32) ಮಕ್ಕಳಲ್ಲಿ ಯಾರಿಗಾದರೂ ಕಾಯಿಲೆಗಳು ಬಂದಿತ್ತೇ? ಹೌದು / ಇಲ್ಲ

33) ಬಂದಿದ್ದರೆ ಯಾವುದು? ......................

34) ಎಲ್ಲಿ ತೋರಿಸಿದ್ದೀರಿ? ......................

35) ಆರೋಗ್ಯ ಸೇವೆಗಳ ಬಗ್ಗೆ :

| ಕ್ರ. ಸಂ. | ಆರೋಗ್ಯ ಸೇವೆ ದೊರೆಯುವ ಸ್ಥಳ : ವ್ಯಕ್ತಿ | ದೊರೆಯುವ ಸೇವೆ ಪ್ರಮಾಣ | ತಗಲುವ ವೆಚ್ಚ | ನಂಬಿಕೆ |
|---|---|---|---|---|
| 01. | ಹಳ್ಳಿ ವೈದ್ಯರು | | | |
| 02. | ಮನೆ ಮದ್ದು | | | |
| 03. | ಅಂಗನವಾಡಿ ಕಾರ್ಯಕರ್ತೆ | | | |
| 04. | ಎ. ಎನ್.ಎಂ. ಉಪಕೇಂದ್ರ | | | |
| 05. | ಪಿ.ಎಚ್.ಸಿ | | | |
| 06. | ಪಿ.ಎಚ್.ಯು | | | |
| 07. | ಖಾಸಗಿ ವೈದ್ಯರು | | | |
| 08. | ತಾಲ್ಲೋಕು ಸರ್ಕಾರಿ ಆಸ್ಪತ್ರೆ | | | |
| 09. | ತಾಲ್ಲೋಕು ಖಾಸಗಿ ಆಸ್ಪತ್ರೆ | | | |
| 10. | ಜಿಲ್ಲಾ ಸರ್ಕಾರಿ ಆಸ್ಪತ್ರೆ | | | |
| 11. | ಜಿಲ್ಲಾ ಖಾಸಗಿ ಆಸ್ಪತ್ರೆ | | | |

ಸೂಚನೆ:- ದೊರೆಯುವ ಸೇವೆಯ ಪ್ರಮಾಣ ಮತ್ತು ನಂಬಿಕೆಗಳಿಗೆ 0 ಯಿಂದ 10 ರವರೆಗಿನ ಅಂಕಿಗಳನ್ನು ಕೇಳಿ ಬರೆಯಿರಿ.

36. ನಿಮ್ಮ ಕುಟುಂಬದಲ್ಲಿ ಗಳಿಸಿದ ಹಣದಲ್ಲಿ ಯಾವುದಕ್ಕೆ ಎಷ್ಟು ಖರ್ಚು ಮಾಡುತ್ತೀರಿ.

| ವಿಷಯ | ವರ್ಷಕ್ಕೆ ಖರ್ಚು | ಶೇಖಡವಾರು |
|---|---|---|
| ಊಟಕ್ಕಾಗಿ | | |
| ಬಟ್ಟೆಗಾಗಿ | | |
| ಮಕ್ಕಳ ವಿದ್ಯಾಭ್ಯಾಸಕ್ಕಾಗಿ | | |
| ಹಬ್ಬಗಳಿಗಾಗಿ | | |
| ಸಾಲ ಮತ್ತು ಬಡ್ಡಿಗಾಗಿ | | |
| ಕೃಷಿಗಾಗಿ | | |
| ದುಶ್ಚಟಗಳಿಗಾಗಿ | | |
| ಕಾಯಿಲೆಗಳಿಗಾಗಿ | | |
| ಉಳಿತಾಯ | | |
| ಇತರೆ - ತಿಳಿಸಿ. | | |



COMH 321
07183
COMMUNITY HEALTH CELL
LIBRARY AND DOCUMENTATION UNIT

## ಗ್ರಾಮೀಣ ಬಡಜನರ ಉತ್ತಮ ಆರೋಗ್ಯಕ್ಕಾಗಿ ಸಶಕ್ತತೆ ಕಾರ್ಯಕ್ರಮದ ಗ್ರಾಮದಲ್ಲಿ ಹಮ್ಮಿಕೊಳ್ಳುವ ಮಾದರಿ ಯೋಜನೆ

### ಪೂರ್ವಭಾವಿ ಸಿದ್ಧತೆಗಳು:

1. ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟದಲ್ಲಿ ಪೂರ್ವಬಾವಿ ಸಭೆಯಾಗಬೇಕು. ಪಿ.ಆರ್.ಎ. ಮಾಡಲು ತಯಾರಿ ಆಗಬೇಕು. ಪಿ.ಹೆಚ್.ಸಿ. ಸಿಬ್ಬಂದಿಗಳಿಗೆ ಮಾಹಿತಿ ದೊರೆಯಬೇಕು.

2. ಪಿ.ಹೆಚ್.ಸಿ. ಸಭೆಯಲ್ಲಿ ಪಿ.ಆರ್.ಎ. ಮಾಡುವ ದಿನಾಂಕ: ನಿಗಧಿಯಾಗಬೇಕು ಅಥವಾ ಮೊದಲೇ ನಿಗಧಿಯಾಗಿದ್ದರೆ ಈ ದಿನಾಂಕ ನಿರ್ಧರಿಸಿ ಸಂಬಂಧಪಟ್ಟ ಎ.ಎನ್.ಎಂ. ಮತ್ತು ಗ್ರಾಮಸ್ಥರಿಗೆ ತಿಳಿಸಬೇಕು.

3. ನಿಗಧಿಪಡಿಸಿದ ದಿನಾಂಕ ಮತ್ತು ಕಾರ್ಯಕ್ರಮದ ಬಗ್ಗೆ ಗ್ರಾಮದ ಸದಸ್ಯರಿಗೆ, ಮುಖಂಡರಿಗೆ ಮಾಹಿತಿ ನೀಡಬೇಕು.

4. ಮುಂಚಿತವಾಗಿಯೇ ಗ್ರಾಮದಲ್ಲಿ ಕಾರ್ಯಕ್ರಮಕ್ಕೆ ಸಹಕಾರಿಯಾಗುವಂತೆ ಕಾರ್ಯನಿರ್ವಹಿಸಲು ಸ್ವಯಂ ಸೇವಕರನ್ನು ಗುರ್ತಿಸಿರಬೇಕು.

### ಮೊದಲನೆ ದಿನದ ಕಾರ್ಯಕ್ರಮ:-

| | |
|---|---|
| ವಾತಾವರಣ ನಿರ್ಮಾಣ ಕಾರ್ಯಕ್ರಮ | ಬೆಳಿಗ್ಗೆ 8-00 ಗಂಟೆ ಯಿಂದ |
| ಕಾಲ್ನಡಿಗೆ ಜಾಥಾ | 8-00 ರಿಂದ 8-30 ರವರೆಗೆ |
| ಮಕ್ಕಳ ಚಟುವಟಿಕೆ | 8-30 ರಿಂದ 9-00 ರವರೆಗೆ |
| ಗ್ರಾಮಸಭೆ | 9-00 ರಿಂದ 10-00ರವರೆಗೆ |

**ಕಾಲ್ನಡಿಗೆ ಜಾಥಾ:**

**ಉದ್ದೇಶ:** ಗ್ರಾಮದ ಜನರನ್ನು ಒಂದು ಕಡೆ ಕಲೆ ಹಾಕಲು ಮತ್ತು ಎಲ್ಲರಿಗೂ ಸಹ ಕಾರ್ಯಕ್ರಮದ ಬಗ್ಗೆ ಅರಿವು ಮೂಡಿಸಲು.

**ಭಾಗವಹಿಸುವವರು:** ಶಾಲಾ ಮಕ್ಕಳು, ಶಿಕ್ಷಕರು, ಗ್ರಾಮದ ಮುಖಂಡರು, ಸದಸ್ಯರು ಮತ್ತು ಸಂಪನ್ಮೂಲ ವ್ಯಕ್ತಿಗಳು ಅಂಗನವಾಡಿ ಕಾರ್ಯಕರ್ತರು : ಎ.ಎನ್.ಎಂ., ಇತರರು.

**ಬೇಕಾಗಿರುವ ಸಾಮಗ್ರಿಗಳು:** ಘೋಷಣಾ ಫಲಕಗಳು : ಬ್ಯಾನರ್ : ಪೋಸ್ಟರ್‌ಗಳು

**ಮಕ್ಕಳ ಚಟುವಟಿಕೆ:** ಮಕ್ಕಳ ಆಟಗಳು ಹಾಡುವುದು ಇತ್ಯಾದಿ.

ಗ್ರಾಮ ಸಭೆ:-

ಉದ್ದೇಶ: ಯೋಜನೆಯ ಬಗ್ಗೆ ಮಾಹಿತಿ ನೀಡುವುದು ಹಾಗೂ ಪರಿಚಯ.

ಭಾಗವಹಿಸುವವರು: ಗ್ರಾಮದ ಮುಖಂಡರು , ಸದಸ್ಯರು, ಮಹಿಳೆಯರು, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ಎ.ಎನ್.ಎಂ, ಸಂಪನ್ಮೂಲ ವ್ಯಕ್ತಿಗಳು.

(ಚಟುವಟಿಕೆ - 1) ವೇಳೆ: ಬೆಳಿಗ್ಗೆ: 10-00 ರಿಂದ ಮಧ್ಯಾಹ್ನ: 1-00

ನಕ್ಷೆ ರಚನೆ

ಉದ್ದೇಶ:-

- ಗ್ರಾಮದ ಚಿತ್ರಣ ತಿಳಿದುಕೊಳ್ಳಲು
- ಗ್ರಾಮದ ಸಂಪನ್ಮೂಲ ಗುರುತಿಸಲು
- ಗ್ರಾಮದ ಸೇವಾ ಕೇಂದ್ರಗಳನ್ನು ತಿಳಿಯಲು
- ಗ್ರಾಮದ ಬಗ್ಗೆ ಇತರ ಅಭಿವೃದ್ಧಿಗಳ ಬಗ್ಗೆ ತಿಳಯಲು

ವಿಧಾನ: ಸಮೂಹಿಕ ಮತ್ತು ಆರೋಗ್ಯ ಸಂಪನ್ಮೂಲ ನಕ್ಷೆ ರಚನೆ

ಭಾಗವಹಿಸುವವರು:- ಗ್ರಾಮದ ಮುಖಂಡರು, ಸದಸ್ಯರು, ಮಹಿಳೆಯರು, ಕನಿಷ್ಠ 50 ರಿಂದ 75 ಜನರಿರಬೇಕು.

ಬೇಕಾಗಿರುವ ಸಾಮಗ್ರಿಗಳು:- ರಂಗೋಲಿ ಪುಡಿ , ಬಣ್ಣದ ಪುಡಿ, ಚಾರ್ಟ್ ಪೇಪರ್, ಮಾರ್ಕರ್, ಸ್ಕೆಚ್‌ಪೆನ್ನು

ಬೇಕಾಗಿರುವ ಅವಧಿ :- 3 ಗಂಟೆ: ಬೆಳಿಗ್ಗೆ 10-00 ರಿಂದ 1-00 ರವರೆಗೆ.

ಹೊರಬರುವ ಅಂಶಗಳು:- ಗ್ರಾಮದಲ್ಲಿರುವ ಮನೆಗಳು, ರಸ್ತೆ, ಚರಂಡಿ, ಸಾರ್ವಜನಿಕ ಸೌಲಭ್ಯಗಳು ಹಾಗೂ ಸೇವಾ ಕೇಂದ್ರಗಳ ಬಗ್ಗೆ ಸೂಕ್ತ ಚಿತ್ರಣ ದೊರೆಯುತ್ತದೆ.

(ಚಟುವಟಿಕೆ :2)

ಸಂಪತ್ತಿನವಾರು ಶ್ರೇಣೀಕರಣ ಮಾಡುವುದು:

ಉದ್ದೇಶ: ಗ್ರಾಮದಲ್ಲಿರುವ ಕುಟುಂಬಗಳನ್ನು ಸಂಪತ್ತಿನವರು ಅಂದರೆ ಅತಿ ಶ್ರೀಮಂತರು, ಮಧ್ಯಮ ವರ್ಗ, ಬಡವರು ಮತ್ತು ಅತಿ ಬಡ ಕುಟುಂಬಗಳನ್ನು ಗುರ್ತಿಸುವುದಕ್ಕಾಗಿ

ವಿಧಾನ: ಕಾರ್ಡ್‌ಗಳನ್ನು ಬಳಸಿ ಮಾಡುವುದು.

ಭಾಗವಹಿಸುವವರು :- ಗ್ರಾಮದ ಹಿರಿಯರು, ಸದಸ್ಯರು ಹಾಗೂ ಮಹಿಳೆಯರು.

ಬೇಕಾಗಿರುವ ಸಾಮಗ್ರಿಗಳು: ಕಾರ್ಡ್‌ಗಳು, ಮಾರ್ಕ್‌ರ್, ಸ್ಕೆಚ್‌ಪೆನ್, ಚಾರ್ಟ ಪೇಪರ್

ಬೇಕಾಗಿರುವ ಅವಧಿ:- 2-00 ಗಂಟೆ ಮದ್ಯಾಹ್ನ 2-30 ರಿಂದ 4-30ರ ವರೆಗೆ

ಹೊರಬರುವ ಅಂಶಗಳು: ಗ್ರಾಮದಲ್ಲಿರುವ ಒಟ್ಟು ಕುಟುಂಬಗಳಲ್ಲಿ ಅತಿ ಬಡಕುಟುಂಬಗಳು ಎಷ್ಟು ಮತ್ತು ಯಾವುದು ಎಂಬುದು ತಿಳಿಯುತ್ತದೆ ಹಾಗೆಯೇ ಬಡವರು ಮಧ್ಯಮ ವರ್ಗ ಹಾಗೂ ಶ್ರೀಮಂತರು ಎಷ್ಟು ಕುಟುಂಬಳಿಗೆ ಎಂದು ತಿಳಿಯುತ್ತದೆ.

ಕ್ರೋಢೀಕರಣ:- ಸಂಜೆ 5-30ರಿಂದ ಕ್ರೋಡಿಕರಣ ಹಾಗೂ ಗ್ರಾಮದಲ್ಲಿ ಈ ಎರಡು ಚಟುವಟಿಕೆಗಳ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಕೊಳ್ಳುವುದು ಮತ್ತು ತಪ್ಪಿದ್ದರೆ ಸರಿಪಡಿಸಿಕೊಳ್ಳುವುದು ಸಮೀಕ್ಷೆಗೆ ಸಿದ್ದತೆ ಮಾಡಿಕೊಳ್ಳುವುದು.

ಎರಡನೇ ದಿನದ ಕಾರ್ಯಕ್ರಮಗಳು : ಬೆಳಿಗ್ಗೆ 8-00 ರಿಂದ 8-30 ಮಕ್ಕಳ ಚಟುವಟಿಕೆ

ಚಟುವಟಿಕೆ: 3

ಕಾಯಿಲೆಗಳ ಬಗ್ಗೆ

ಉದ್ದೇಶ:

- ಗ್ರಾಮದಲ್ಲಿರುವ ಕಾಯಿಲೆಗಳ ಬಗ್ಗೆ ತಿಳಿಯಲು
- ಯಾವಾಗ ಬರುತ್ತವೆ ಮತ್ತು ಯಾಕೆ ಬರುತ್ತವೆ.
- ಜನರಲ್ಲಿ ಇದರ ಬಗ್ಗೆ ಇರುವ ನಂಬಿಕೆಗಳ ಬಗ್ಗೆ ತಿಳಿಯಲು

ವಿಧಾನ ಋತುಮಾನ ನಕ್ಷೆ ತಯಾರಿಸುವುದು

ಭಾಗವಹಿಸುವವರು:- ಗ್ರಾಮದ ಸದಸ್ಯರು , ಮುಖಂಡರು, ಮುಖ್ಯವಾಗಿ ಮಹಿಳೆಯರು ಹಾಗೂ ಬಡವರು

ಬೇಕಾಗುವ ಸಾಮಗ್ರಿಗಳು:- ರಂಗೋಲಿ ಪುಡಿ , ಬಣ್ಣದ ಪುಡಿ, ಚಾರ್ಟ್ ಪೇಪರ್, ಮಾರ್ಕ್‌ರ್ ಸ್ಕೆಚ್ ಪೆನ್, ಸ್ಥಳೀಯವಾಗಿ ಸಿಗುವ ವಸ್ತುಗಳು.

ಬೇಕಾಗುವ ಅವಧಿ: 2-00 ಗಂಟೆ ಬೆಳಿಗ್ಗೆ 8-30 ರಿಂದ 10-30 ರವರೆಗೆ

ಹೊರಬರುವ ಅಂಶಗಳು :- ಅಯಾ ಗ್ರಾಮದಲ್ಲಿ ಕಾಲಕ್ಕನುಗುಣವಾಗಿ ಬರುವ ಕಾಯಿಲೆಗಳು ಯಾವ ಕಾಲದಲ್ಲಿ ಬರುತ್ತವೆ ಮತ್ತು ಅಯಾ ಕಾಲಕ್ಕನುಗುಣವಾಗಿ ಅದರ ಪ್ರಮಾಣಗಳು ಸಹ ತಿಳಿಯುತ್ತವೆ.

(ಚಟುವಟಿಕೆ:4)

**<u>ವಿಷಯವಾರು ವೆಚ್ಚದ ಬಗ್ಗೆ :</u>**

<u>ಉದ್ದೇಶ:-</u> ಗ್ರಾಮದಲ್ಲಿ ಜನರು ತಮ್ಮ ಗಳಿಕೆಯಲ್ಲಿ ಯಾವ ಯಾವ ಉದ್ದೇಶಗಳಿಗೆ ಎಷ್ಟೆಷ್ಟು ಖರ್ಚು ಮಾಡುತ್ತಾರೆ ಎಂದು ತಿಳಿಯಲು.

<u>ವಿಧಾನ:-</u> ಪೈ ನಕ್ಷೆ ತಯಾರಿಸುವುದು (ಎರಡು ನಕ್ಷೆ ತಯಾರಿಸುವುದು)

<u>ಭಾಗವಹಿಸುವವರು:-</u> ಗ್ರಾಮದ ಸದಸ್ಯರು, ಮುಖಂಡರು, ಒಂದು ನಕ್ಷೆ (ಗ್ರಾಮದ ಬಡಜನರನ್ನು ಸೇರಿಸಿ ಒಂದು ನಕ್ಷೆ ಮಾಡಿಸುವುದು) ಬಡಜನತೆ, ಮಹಿಳೆಯರು ಮುಖ್ಯವಾಗಿ ಭಾಗವಹಿಸಬೇಕು.

<u>ಬೇಕಾಗಿರುವ ಸಾಮಗ್ರಿಗಳು:-</u> ರಂಗೋಲಿ ಪುಡಿ, ಬಣ್ಣದಪುಡಿ, ಮಾರ್ಕರ್, ಸ್ಕೆಚ್‌ಪೆನ್, ಚಾರ್ಟ್ ಪೇಪರ್, ಸ್ಥಳೀಯವಾಗಿ ಸಿಗುವ ಕಡ್ಡಿಗಳು.

<u>ಬೇಕಾಗಿರುವ ಅವಧಿ:-</u> 1 ಗಂಟೆ ಮದ್ಯಾಹ್ನ 2-00 ರಿಂದ 3-00 ಗಂಟೆ

<u>ಹೊರ ಬರುವ ಅಂಶಗಳು:-</u> ಗ್ರಾಮದ ಜನರು ಸಂಪಾದಿಸುವ ಹಣದಲ್ಲಿ ಕೃಷಿಗೆ , ವಿದ್ಯಾಭ್ಯಾಸಕ್ಕಾಗಿ, ಆರೋಗ್ಯಕ್ಕಾಗಿ, ಸಾಲಕ್ಕಾಗಿ, ಹಬ್ಬಗಳಿಗಾಗಿ ಇತರೆ ಎಷ್ಟೆಷ್ಟು ಖರ್ಚು ಮಾಡುತ್ತಾರೆ ಎಂಬುದು ತಿಳಿಯುತ್ತದೆ ಮುಖ್ಯವಾಗಿ ಅವರ ಸಂಪಾದನೆಯಲ್ಲಿ ಆರೋಗ್ಯದ ಸೇವೆಗಳಿಗಾಗಿ ಎಷ್ಟು ಖರ್ಚು ಮಾಡುತ್ತಾರೆ ಎಂಬುದು ತಿಳಿಯುತ್ತದೆ.

(ಚಟುವಟಿಕೆ:5)

<u>ಆರೋಗ್ಯ ಸೇವೆಗಳು ಅವುಗಳ ಲಭ್ಯತೆಗಳ ಬಗ್ಗೆ :</u>

<u>ಉದ್ದೇಶ:-</u> ಗ್ರಾಮ ಜನರಿಗೆ ದೊರೆಯುವ ಆರೋಗ್ಯದ ಸೇವೆಗಳ ಅವುಗಳ ಪ್ರಮಾಣಗಳ ಬಗ್ಗೆ ತಿಳಿಯಲು.

<u>ವಿಧಾನ:-</u> ಚಪಾತಿ ಅಥವಾ ವೆನ್ ನಕ್ಷೆ

<u>ಬೇಕಾಗಿರುವ ಸಾಮಗ್ರಿ:-</u> ಚಾರ್ಟ್ ಪೇಪರ್, ಮಾರ್ಕರ್, ಸ್ಕೆಚ್ ಪೆನ್ನು, ವಿವಿಧ ಬಣ್ಣ ವಿವಿಧ ಆಕಾರದ ಚಾರ್ಟ್ ಪೇಪರ್‌ನ ವೃತ್ತಗಳು, ವಿವಿಧ ಸೈಜಿನ ಕಲ್ಲುಗಳು ಮತ್ತು ಸ್ಥಳೀಯವಾಗಿ ಸಿಗುವ ವಸ್ತುಗಳು.

<u>ಬೇಕಾಗಿರುವ ಅಂಶಗಳು:</u> 2 1/2 (ಎರಡು ವರೆ) ಗಂಟೆ ಮಧ್ಯಾಹ್ನ 3-00 ರಿಂದ 5-30 ರವರೆಗೆ

ಹೊರ ಬರುವ ಅಂಶಗಳು:- ಗ್ರಾಮದ ಜನರಿಂದ ಆರೋಗ್ಯದ ಸೇವೆಗಳು ಇರುವ ದೂರ ದೊರೆಯುವ ಸೌಲಭ್ಯಗಳ ಪ್ರಮಾಣಗಳ ಬಗ್ಗೆ ಮಾಹಿತಿ ಹೊರಬರುತ್ತದೆ.

ಸಮೀಕ್ಷೆಯನ್ನು ಸಹ ಉಳಿದ ಅವಧಿಯಲ್ಲಿ ಹಮ್ಮಿಕೊಳ್ಳ ಬೇಕಾಗುತ್ತದೆ. ಈ ದಿನವೆ ಮಾಡಿದ ಎಲ್ಲಾ ನಕ್ಷೆಗಳ ನಕಲು ಮಾಡುವುದು ವರದಿ ತಯಾರಿ ಮಾಡಿಕೊಳ್ಳುವುದು.

ಮೂರನೇ ದಿನದ ಕಾರ್ಯಕ್ರಮ

(ಚಟುವಟಿಕೆ:6)

ಗ್ರಾಮದ ಇತಿಹಾಸ ಮತ್ತು ಸಂಕ್ರಾಮಿಕ ಕಾಯಿಲೆ:

ಉದ್ದೇಶ: ಗ್ರಾಮವು ಬೆಳೆದು ಬಂದ ಇತಿಹಾಸ ಜೊತೆಗೆ ಅದಕ್ಕನುಗುಣವಾಗಿ ಆಗಿದ್ದಾಗ ಬಂದ ಸಂಕ್ರಾಮಿಕ ಕಾಯಿಲೆಗಳ ಬಗ್ಗೆ.

ವಿಧಾನ: ಗ್ರಾಮದ ಇತಿಹಾಸದ ವಿಧಾನ (ಟೈಮಲೈನ್)

ಭಾಗವಹಿಸುವವರು:- ಗ್ರಾಮದ ಅತ್ಯಂತ ಹಿರಿಯರು, ಮಧ್ಯಮ ವಯಸ್ಕರು ಹಿರಿಯ ಮಹಿಳೆಯರು ಮುಖ್ಯವಾಗಿರುತ್ತಾರೆ.

ಬೇಕಾಗಿರುವ ಸಾಮಾಗ್ರಿ :- ಚಾರ್ಟ್‌ಪೇಪರ್, ಸ್ಕೆಚ್‌ಪೆನ್, ಮಾರ್ಕರ್

ಬೇಕಾಗಿರುವ ಅವಧಿ:- 2 ಗಂಟೆ ಬೆಳಿಗ್ಗೆ 8-30 ರಿಂದ 10-30 ರವರೆಗೆ

ಹೊರಬರುವ ಅಂಶಗಳು:-

ಗ್ರಾಮದ ಇತಿಹಾಸ
ಕಾಲ ಕಾಲಕ್ಕೆ ಬಂದ ಕಾಯಿಲೆಗಳು
ಜನರು ಬದಲಾವಣೆ ಮಾಡಿಕೊಂಡಿದ್ದು

(ಚಟುವಟಿಕೆ: 7)

ಆರೋಗ್ಯ ವೆಚ್ಚಗಳು ಮತ್ತು ನಷ್ಟಗಳ ಬಗ್ಗೆ:

ಉದ್ದೇಶ: ಗ್ರಾಮದಲ್ಲಿ ಜನರು ಯಾವ ಕಾಯಿಲೆಗಳಿಗೆ ಎಷ್ಟೆಷ್ಟು ಖರ್ಚು ಮಾಡುತ್ತಾರೆ ಎಂಬುದನ್ನು ತಿಳಿಯಲು

ವಿಧಾನ: ಮ್ಯಾಟ್ರಿಕ್ಸ್ ಯಾರ್ಕಿಂಗ್ ಗುಂಪು ಚರ್ಚೆ

ಭಾಗವಹಿಸುವವರು:- ಗ್ರಾಮದ ಸದಸ್ಯರು ಮುಖ್ಯವಾಗಿ ಮಧ್ಯವಯಸ್ಕ ಮಹಿಳೆಯರು.

ಬೇಕಾಗುವ ಸಾಮಗ್ರಿ: ಚಾರ್ಟ್ ಪೇಪರ್, ಸ್ಕೆಚ್ ಪೆನ್ನು, ಮಾರ್ಕರ್

ಬೇಕಾಗುವ ಅವಧಿ:- ಎರಡು ಗಂಟೆ 10-30 ರಿಂದ 12-30 ರ ವರೆಗೆ

ಹೊರಬರುವ ಅಂಶಗಳು:- ಗ್ರಾಮದಲ್ಲಿ ಜನರು ತಾವು ದುಡಿದ ಹಣದಲ್ಲಿ ವಿವಿಧ ಕಾಯಿಲೆಗಳ ಬಗ್ಗೆ ಎಷ್ಟೆಷ್ಟು ಖರ್ಚು ಮಾಡುತ್ತಾರೆ ಅನವಶ್ಯಕವಾಗಿ ಎಷ್ಟು ಖರ್ಚು ಮಾಡುತ್ತಾರೆ ಎಂಬುದು ತಿಳಿಯುತ್ತದೆ.

(ಚಟುವಟಿಕೆ: 8)

ಕಾಯಿಲೆಗಳು ಮತ್ತು ಕಾರಣಗಳು:

ಉದ್ದೇಶ:- ಗ್ರಾಮದಲ್ಲಿ ಬರುವ ಪ್ರಮುಖ ಕಾಯಿಲೆಗಳನ್ನು ಗುರ್ತಿಸುವುದು ಮತ್ತು ಅದಕ್ಕೆ ಕಾರಣಗಳು ಮತ್ತು ಪರಿಹಾರೋಪಾಯಗಳನ್ನು ಜನರಲ್ಲಿ ಮನವರಿಕೆ ಮಾಡಿಕೊಡುವುದು.

ವಿಧಾನ: ಗುಂಪು ಚರ್ಚೆ, ಚಿತ್ರಗಳ ಬಳಕೆ, ಫ್ಲೋ ಚಾರ್ಟ್

ಭಾಗವಹಿಸುವುದು:- ಗ್ರಾಮದ ಸದಸ್ಯರು, ಮಹಿಳೆಯರು ಹಾಗೂ ಹಿರಿಯರು

ಬೇಕಾಗುವ ಸಾಮಾಗ್ರಿ:- ಸ್ಕೆಚ್ ಪೆನ್ನು, ಮಾರ್ಕರ್, ಚಾರ್ಟ್ ಪೇಪರ್ ಹಾಗೂ ಚಿತ್ರಗಳು

ಬೇಕಾಗಿರುವ ಅವಧಿ:- 2 ಗಂಟೆ 2-00 ರಿಂದ 4- ಗಂಟೆ

ಹೊರಬರುವ ಅಂಶಗಳು: ಗ್ರಾಮದ ಪ್ರಮುಖ ಆರೋಗ್ಯದ ಸಮಸ್ಯೆಗಳು ಮತ್ತು ಅವುಗಳಿಗೆ ಕಾರಣಗಳು ಮತ್ತು ಪರಿಹಾರೋಪಾಯಗಳು ತಿಳಿಯುತ್ತದೆ.

(ಚಟುವಟಿಕೆ : 9)

**ಆರೋಗ್ಯದ ನಕ್ಷೆ:**

**ಉದ್ದೇಶ:** ಗ್ರಾಮದಲ್ಲಿ ಕುಡಿಯುವ ನೀರಿನ ಸೌಲಭ್ಯಗಳು ಮತ್ತು ಅದರ ನಿರ್ವಹಣೆ
ಗ್ರಾಮದಲ್ಲಿರುವ ಅನೈರ್ಮಲ್ಯದ ಸ್ಥಿತಿಯ ಬಗ್ಗೆ ತಿಳಿಯಲು.

**ಉದ್ದೇಶ:** ಗ್ರಾಮದಲ್ಲಿ ನಡಿಗೆ ಮೂಲಕ ಗುರುತಿಸುವುದು (ಕಾಲು ನಡಿಗೆ)

**ಭಾಗವಹಿಸುವವರು:-** ಗ್ರಾಮದ ಮುಖಂಡರು, ಸದಸ್ಯರು ಹಾಗೂ ಯುವಕರು

**ಬೇಕಾಗುವ ಸಾಮಾಗ್ರಿ:-** ಚಾರ್ಟ್ ಪೇಪರ್, ಸ್ಕೆಚ್ ಪೆನ್ನು ಹಾಗೂ ಮಾರ್ಕರ್

**ಬೇಕಾಗುವ ಅವಧಿ:** 2 ಗಂಟೆ 4 ರಿಂದ 6 ಗಂಟೆ (ಗ್ರಾಮಕ್ಕ ತಕ್ಕಂತೆ)

**ಹೊರಬರುವ ಅಂಶಗಳು:-** ಗ್ರಾಮದಲ್ಲಿರುವ ಅನೈರ್ಮಲ್ಯದ ಪರಿಸ್ಥಿತಿ ತಿಳಿಯುತ್ತದೆ. ಅನೈರ್ಮಲ್ಯದ ಸ್ಥಳಗಳನ್ನು ಗುರುತಿಸಿ ಅವರುಗಳಿಂದುಂಟಾಗುವ ಪರಿಣಾಮಗಳು ತಿಳಿಯುತ್ತದೆ.

**ನಾಲ್ಕನೇ ದಿನ ಕಾರ್ಯಕ್ರಮಗಳು:**

**ಬೆಳಿಗ್ಗೆ:** ಸಂಪನ್ಮೂಲ ವ್ಯಕ್ತಿಗಳಿಂದ ಎಲ್ಲಾ ನಕ್ಷೆಗಳ ಕ್ರೋಢೀಕರಣ ಮತ್ತು ಅವುಗಳ ವಿಶ್ಲೇಷಣೆ ಮಾಡುವುದು ಸಮೀಕ್ಷೆ ಮುಕ್ತಾಯ ಮಾಡುವುದು. ಸಮೀಕ್ಷೆಯನ್ನು ಎರಡು ದಿನದಿಂದಲೇ ಪ್ರಾರಂಬಿಸಿಕೊಳ್ಳಬೇಕು.

**ಮಧ್ಯಾಹ್ನ:-** ಆರೋಗ್ಯ ಮೇಳ 4 ಗಂಟೆಯಿಂದ 5 ಗಂಟೆಯವರೆಗೆ 4 ದಿನದಿಂದ ಮಾಡಿದ ನಕ್ಷೆಗಳ ಚಾರ್ಟ್‌ಗಳನ್ನು ಪ್ರದರ್ಶಿಸುವುದು.

**ಸಾಯಂಕಾಲ:** ಗ್ರಾಮ ಸಭೆ : 6 ರಿಂದ 8 ಗಂಟೆಯವರೆಗೆ
ಗ್ರಾಮದ ಪ್ರಮುಖ ಆರೋಗ್ಯ ಸಮಸ್ಯೆಗಳನ್ನು ಆದ್ಯತೆ ಮೇರೆಗೆ ಗುರುತಿಸುವುದು.
ಅವುಗಳಿಗೆ ಪರಿಹಾರೋಪಯಗಳನ್ನು ಗುರುತಿಸುವುದು.
ಗ್ರಾಮ ಆರೋಗ್ಯ ಸಮಿತಿ ರಚಿಸುವುದು
ಗ್ರಾಮ ಆರೋಗ್ಯ ಕ್ರಿಯಾ ಯೋಜನೆ ಮಾಡುವುದು.


**5ನೇ ದಿನದ ಕಾರ್ಯಕ್ರಮಗಳು**

**ಬೆಳಿಗ್ಗೆ:** 10 ಗಂಟೆಗೆ

ಕರುಣಾ ಟ್ರಸ್ಟ್‌ಗೆ ಹಾಜರಾಗುವುದು
ಲೆಕ್ಕ ಪತ್ರ ನೋಡುವುದು
ಗ್ರಾಮದಲ್ಲಿ ನಾಲ್ಕು ದಿನ ಮಾಡಿದ ಸೂಕ್ಷ್ಮ ಯೋಜನೆಯ (4 ಪ್ರತಿಗಳು) ತಯಾರಿ ಮಾಡುವುದು

******

# ಸಾಮಾಜಿಕ ಸಂಪನ್ಮೂಲ ನಕ್ಷೆ. ರಾಯರಹುಂಡಿ.




ಮಾಹಿತಿ ನೀಡಿದವರು:-

1) ಮಾದೇಶ. ಎಂ
2) ಶಾಂತೇಗೌಡ
3) ಸಿದ್ದಪ್ಪ
4) ರಾಜಪ್ಪ
5) ನಂಜಪ್ಪ
6) ರಂಗೇಗೌಡ

ಮಾಹಿತಿ ಸಂಗ್ರಹಿಸಿದವರು:-

1) ಶೋಭ. D.
2) ಕೃಷ್ಣ C.K
3) ಸುಮ
4) ನಿರ್ಮಲ
5) ರಾಜು
6) ಮಂಜು

# ಸಂಪತ್ತಿನ ವಾರು ಶ್ರೇಣೀಕರಣ. (WEALTH RANKING) ಕುರುಬೂರು 29-11-1999

| | ಅತಿ ಬಡವರು | ಬಡವರು. | ಮಧ್ಯಮ | ಶ್ರೀಮಂತರು. |
|---|---|---|---|---|
| ಲಕ್ಷಣಗಳು | ದಿನಕೂಲಿ ಮಾಡಿದರೆ ಜೀವನವಿರುವವರು ಜಮೀನುಇಲ್ಲದಿರುವುದು<br>ಧನಕರು ಇಲ್ಲದಿರುವುದು<br>ಸಾಲವೇ ಜೀವನವಾಗಿರುತ್ತದೆ<br>ದಿನದಲ್ಲಿ ಒಂದು ವೇಳೆ ಊಟ ಕ್ಕಿದ್ದರೆ ಮತ್ತೊಂದು ವೇಳೆ ಊಟಕ್ಕಿರುವುದಿಲ್ಲ. | ಜಮೀನಿಲ್ಲದಿರುವುದು<br>ಕೂಲಿ ಮಾಡುವವರು / ಸಣ್ಣವ್ಯಾಪಾರ ಧನಕರು ಇಲ್ಲದಿರುವುದು. ಸಾಲ ಸೋಲ ಮಾಡುತ್ತಾರೆ.<br>2 ವೇಳೆ ಊಟ ಸಿಗುತ್ತದೆ. | 5 ಎಕರೆಗಿಂತ ಕಡಿಮೆ ಜಮೀನು ಉಳ್ಳವರು<br>2 ಬೆಳೆ ತೆಗೆಯುವುದು. ವರ್ಷಕ್ಕೆ<br>ಕೆಲವು ಧನಕರುಗಳು ಇರುವುದು.<br>ಹಣಕಾಸಿನ ಸಾಲ ನೀಡುವುದು/ ಪಡೆಯುವುದು. ಇಲ್ಲ<br>ಮೂರು ವೇಳೆ ಊಟ ಮಾಡುವವರು. | 5 ಎಕರೆಗಿಂತ ಹೆಚ್ಚು ಜಮೀನು ಹೊಂದಿರುವುದು<br>ವರ್ಷಕ್ಕೆ 2 ಬೆಳೆ ತೆಗೆಯುವುದು.<br>ಧನಕರುಗಳು ಹೊಂದಿರುವುದು<br>ಹಣದ ವ್ಯವಹಾರ ಮಾಡುವುದು (LENDING)<br>ಮೂರು ವೇಳೆ ಊಟ ಮಾಡುವವರು. |
| | 20 | 35 | 20 | 17 |

**ಮಾಹಿತಿ ನೀಡಿದವರು :-**


1. ಮಾದೇವಸ್ವಾಮಿ.
2. ನಂಜಪ್ಪ.
3. [illegible]
4. ಮಾಂಥಪ್ಪ.
5. ನಾಗೇಂದ್ರ.
6. ರಾಜೇಂದ್ರಪ್ಪ.

**ಮಾಹಿತಿ ಸಂಗ್ರಹಿಸಿದವರು:-**

1. ನಂಜುಂಡಯ್ಯ.
2. ಬಿ. ಶೋಭ.
3. [illegible]
4. C.K. ಶಿವಣ್ಣ.
5. ನಿಮ್ಮಗಲ
6. ರಾಜು.

# ಋತುಮಾನ ನಕ್ಷೆ. ವೀರಪ್ಪ ಒಡೆಯರ ಹುಂಡಿ. ದಿನಾಂಕ:- 29-11-1999

## SEASONAL DIAGRAME




**ಮಾಹಿತಿ ನೀಡಿದವರು:-**


1. ರಾಜೇಂದ್ರ
2. ಕುಮಾರ್
3. ಕಾಳೇಗೌಡರು.
4. ಮರಿಸ್ವಾಮಿ
5. ನಾಗೇಂದ್ರ
6. ಶಿವಸ್ವಾಮಿ
7. ಮಹಾದೇವಸ್ವಾಮಿ.

**ಮಾಹಿತಿ ಸಂಗ್ರಹಿಸಿದವರು:-**


1. ಮುತ್ತುನಾಯಕ್ ಕೆ. ಕೆ.
2. ಚಿಕ್ಕತಾಯಮ್ಮ
3. ದೊರೆಸ್ವಾಮಿ.
4. ತ್ರಿವೇಣಿ.
5. ರವಿ
6. ಚಿನ್ನಸ್ವಾಮಿ (ನಿಟ್ಟನಹುಂಡಿ)
7. ಪರಮೇಶ್
8. ಮಹಮದ್ ರಫಿ
9. ಗೀತ
10. ಸುಮ. ಎಸ್.

# ಪೈ ನಕ್ಷೆ [PIE DIAGRAME] ರಾಯರಹುಂಡಿ. 29-11-99.

## ಗ್ರಾಮದ ಜನರ ವೆಚ್ಚವಾರು ನಕ್ಷೆ.




## ಗ್ರಾಮದ ಕಡು ಬಡವರ ವೆಚ್ಚವಾರು ನಕ್ಷೆ.




INDEX
ಸೂಚಕಗಳು:

: ವ್ಯವಸಾಯ
: ಆಹಾರ
: ಆರೋಗ್ಯ.
= ಸಾಲ
: ದುಶ್ಚಟ.
: ವಿದ್ಯಾಭ್ಯಾಸ
= ಹಬ್ಬ
= ಕಂದಾಯ.

**ಮಾಹಿತಿ ನೀಡಿದವರ ಹೆಸರು:-**

1) ಮಾದಮ್ಮ. 4) ರಂಗಮ್ಮ.
2) ರಾಮುಶು. 5) ನಾಗರಾಜು.
3) ಸಣ್ಣಮ್ಮ.

**ಮಾಹಿತಿ ಪಡೆದವರ ಹೆಸರು:-**


1) D. ಶೋಭಾ. 2) R. ತ್ರಿವೇಣಿ.
3). ನಂಜುಂಡಮ್ಮ. 4) C.K. ಶಿವಣ್ಣ.
5) K. N. ರಾಜು.

# ಚಪಾತಿ ನಕ್ಷೆ ಕೆಂಡನಕುಪ್ಪಲು ತಾರೀಖು 29-11-99

ಗ್ರಾಮದ ದೂರ ಮತ್ತು ಸೇವೆಯ ಪ್ರಮಾಣ :-

CHAPATI DIAGRAME

OR (VENN)




| ಆರೋಗ್ಯ ಸೇವೆಗಳು |
|---|
| 1 ದಾದಿ |
| 2 ನಾಟಿ ವೈದ್ಯರು |
| 3 ಅಂಗನವಾಡಿ |
| 4 ತಾಲ್ಲೂಕು ಖಾಸಗಿ ಆಸ್ಪತ್ರೆ |
| 5 ಜಿಲ್ಲಾ ಜನ ಆಸ್ಪತ್ರೆ |
| 6 ಪ್ರಾಥಮಿಕ ಆರೋಗ್ಯ ಕೇಂದ್ರ |
| 7 ಉಪ ಕೇಂದ್ರ |
| 8 ಖಾಸಗಿ ಆಸ್ಪತ್ರೆ |
| 9 ಸರ್ಕಾರಿ ಆಸ್ಪತ್ರೆ |

| ಮಾಹಿತಿ ನೀಡಿದವರ ಹೆಸರು |
|---|
| ಚಿಕ್ಕತಾಯಮ್ಮ |
| ಮಲ್ಲಮ್ಮ |
| ಮಣ್ಣಾಯಮ್ಮ (ದಾದಿಯರು) |

| ಮಾಹಿತಿ ಪಡೆದವರು |
|---|
| ನಾಗೇಶ |
| ನಿರ್ಮಲ C.P. |
| ಮಹದೇವ ಪ್ರಸಾದ್ S |
| ನಾಗರಾಜು |
| ರತ್ನಮ್ಮ |
| ಮಂಜುನಾಥ |
| ಶಿವಣ್ಣ |
| ಮಹದೇವಮ್ಮ |
| ನಾಗರಾಜು B |
| ಅಕ್ಷರ A |

# ಮ್ಯಾಟ್ರಿಕ್ಸ್ ಶ್ರೇಣೀಕರಣ - MATRIX RANKING. V.P. ಹಿಂಡಿ

## ಆರೋಗ್ಯ ಸೇವೆಗಳು - ತಗಲುವ ವೆಚ್ಚಗಳು. 30-11-99

| ವಿಷಯ | ವೆಚ್ಚಗಳ ಶ್ರೇಣೀಕರಣ | | | | | |
|---|---|---|---|---|---|---|
| ಆರೋಗ್ಯ ಸೇವಾ ಸೌಲಭ್ಯಗಳು | ಔಷಧಿ | ಸಾರಿಗೆ | ಆಹಾರ | ಶುಲ್ಕ | ಇತರೆ | ಒಟ್ಟು |
| ನಾಟಿ ವೈದ್ಯರು | 2 | - | - | - | - | 2 |
| ದಾದಿ | - | - | - | 2 | - | 2 |
| ಕಿ. ಮ. ಆ. ಕಾರ್ಯಕರ್ತೆ | 2 | 5 | 1 | 2 | - | 10 |
| ಖಾಸಗಿ ವೈದ್ಯರು | 4 | 6 | 3 | 4 | 1 | 18 |
| ತಾ॥ ಸಾ॥ ಆಸ್ಪತ್ರೆ | 4 | 6 | 4 | 3 | 2 | 19 |
| ತಾ॥ ಖಾ॥ ಆಸ್ಪತ್ರೆ | 5 | 6 | 5 | 4 | 2 | 22 |
| ಪ್ರಾ. ಆ. ಕೇಂದ್ರ. | 3 | 4 | 1 | 2 | 1 | 11 |
| ಜಿ॥ ಸಾ॥ ಆಸ್ಪತ್ರೆ. | 4 | 6 | 3 | 3 | 3 | 19 |
| ಜಿ॥ ಖಾ॥ ಆಸ್ಪತ್ರೆ. | 6 | 6 | 3 | 5 | 4 | 24 |

ಸೂಚನೆ:- ಕನಿಷ್ಠ ವೆಚ್ಚಕ್ಕೆ 0 ಅಂಕ ಗರಿಷ್ಠ - 10 ಅಂಕಗಳು ಶ್ರೇಣೀಕರಣ ಮಾಡಿದೆ. (ಅಂಕಗಳು)

## ಆರೋಗ್ಯ ಸೇವೆಗಳು - ಶ್ರೇಣೀಕರಣ

| ಆರೋಗ್ಯ ಸೇವೆಗಳು. | ದೂರ. | ಸೌಲಭ್ಯ | ಲಭ್ಯತೆ | ನಂಬಿಕೆ | ನಷ್ಟ | ಒಟ್ಟು. |
|---|---|---|---|---|---|---|
| ನಾಟಿ ವೈದ್ಯರು | 9 | 1 | 5 | 2 | - | 17 |
| ದಾದಿ. | 9 | 1 | 5 | 3 | - | 18 |
| A.N.M. | 6 | 3 | 4 | 5 | 2 | 20 |
| P.H.C. | 5 | 4 | 5 | 5 | 3 | 22 |
| ತಾ॥ ಖಾ॥ ಆಸ್ಪತ್ರೆ | 5 | 6 | 9 | 8 | 2 | 30 |
| ತಾ॥ ಸಾ॥ ಆಸ್ಪತ್ರೆ | 5 | 5 | 7 | 6 | 3 | 26 |
| ಜಿ॥ ಖಾ॥ ಆಸ್ಪತ್ರೆ | 3 | 8 | 10 | 9 | 2 | 32 |
| ಜಿ॥ ಸಾ॥ ಆಸ್ಪತ್ರೆ. | 3 | 7 | 8 | 8 | 3 | 29 |


ಸೂಚನೆ: 0 ಯಿಂದ 10 ರ ಶ್ರೇಣಿಯಲ್ಲಿ ಅಂಕ ನೀಡಲಾಗಿದೆ.

ಮಾಹಿತಿ ನೀಡಿದವರು :-
1) ತಿಪ್ಪೆಸ್ವಾಮಿ
2) ದೊರೆಸ್ವಾಮಿ
3) ಹಿರಿ ಮಾದಯ್ಯ
4) ಆಂಜನಯ್ಯಪ್ಪ
5) ಮಾದಯ್ಯ
6) ಸ್ವಾಮಿ

ಮಾಹಿತಿ ಸಂಗ್ರಹಿಸಿದವರ ಹೆಸರು :-
1) ಕೋಮಲ. D
2) ತ್ರಿವೇಣಿ. R
3) ಪ್ರೇಮರಾಂಬ
4) ನಿರ್ಮಲ
5) ಜ್ಯೋತಿ
6) ರಾಜಲಕ್ಷ್ಮಿ

# ಕಾಲ್ನಡಿಗೆ ನಕ್ಷೆ TRANSECT K.M. ಹುಂಡಿ

ದಿನಾಂಕ : 30-11-99





ಮಾಹಿತಿ ನೀಡಿದವರ ಹೆಸರು:- ಪ್ರಸಾದ್. ವಿಶ್ವರಾಜು

ಮಾಹಿತಿ ಸಂಗ್ರಹಿಸಿದವರ ಹೆಸರು
ನಂಜುಂಡ. ರಾಜು. ಕೆ.ಎನ್.

ಸುಲಲಿತವಾಗಿ ಬರುವ ನಕ್ಷೆ: FLOW CHART:

C.B. ಕುಂದಿ.
30-11-99.

## ಕಾಯಿಲೆಯ ಬಗ್ಗೆ ಸುಲಲಿತವಾಗಿ ಬರುವ ನಕ್ಷೆ




ಮಾಹಿತಿ ನೀಡಿದವರು!-

1). ಮದನಾಯಕ॥ಮ॥ (4) ಶಿವಪ್ಪ.
2) ಮರಿನಿಂಗಮ್ಮ. (5) ನರಸಿಂಹ.
3). ರಾಚಮ್ಮ.

ಮಾಹಿತಿ ಸಂಗ್ರಹಿಸಿದವರು!.

1. [illegible] (4) [illegible]
2) [illegible] (5) [illegible]
3) [illegible] (6) [illegible]

# ಗ್ರಾಮದ ಇತಿಹಾಸದ ಬಗ್ಗೆ - ಸಮಯ ರೇಖೆ: TIME LINE

| ಇಸವಿ. | ವಿಷಯ/ಘಟನೆಗಳು | R.K. ಪುರ. 29:11:99. |
|---|---|---|
| 1935 | - 15 ಮನೆಗಳಿಂದ ಗ್ರಾಮ ಪ್ರಾರಂಭವಾಯಿತು. ಒಂದೇ ಜಾತಿ ಜನರು ಇದ್ದದ್ದು. | |
| 1940. | - ಕ್ಷಾಮ ದಿಂದ ಜನರು ಸತ್ತಿದ್ದು. 5 ಜನರು. | |
| 1945 | - ಮೊದಲು ಗ್ರಾಮದಲ್ಲಿ ಕುಡಿಯಲು ನೀರಿಗಾಗಿ ಬಾವಿ ತೆಗೆಸಿದ್ದು. | |
| 1952. | - ಪ್ಲೇಗ್ ಬಂದು 15 ಜನರು ಸತ್ತಿದ್ದು.<br>- ಸೈಕಲ್ ಮೊದಲು ಕೊಂಡಿದ್ದು (ಶಾಮರು.)<br>- ಕಿರಿಯ ಪ್ರಾಥಮಿಕ ಶಾಲೆ ಪ್ರಾರಂಭವಾದದ್ದು.<br>- 35 ಮನೆಗಳಿದ್ದವು. | |
| 1958 | - ಮೊದಲ ಬಾರಿಗೆ A.N.M. ಗ್ರಾಮಕ್ಕೆ ಬೇಟಿ ನೀಡಿದ್ದು | |
| 1960 | - ಕಾಲರಾ ದಿಂದ ಜನರು. ಮಕ್ಕಳು ಸತ್ತಿದ್ದು 15 ಜನರು ಸತ್ತರು. | |
| 1970 | - ಉಪ ಕೇಂದ್ರ ತೆರೆದದ್ದು. | |
| 1972. | - ಬಸ್ಸಿನ ಸೌಲಭ್ಯ ಗ್ರಾಮಕ್ಕೆ ಬಂದಿದ್ದು. | |
| 1973. | - ವಿದ್ಯುತ್ ಸೌಲಭ್ಯ ಬಂದಿದ್ದು. | |
| 1975 | - ಮಲೇರಿಯಾ ದಿಂದ 10 ಜನರು ಸತ್ತಿದ್ದು. | |
| 1980 | - ಹಿರಿಯ ಪ್ರಾಥಮಿಕ ಶಾಲೆಯಾಗಿ ಬದಲಾದದ್ದು. 100 ಮನೆಗಳಿವೆ. | |
| 1999. | - ಗ್ರಂಥಾಲಯ ಬಂದಿದ್ದು. | |

ಮಾಹಿತಿ ನೀಡಿದವರು:
1) ರಂಗಪ್ಪ 4) ರಾಜಾಶೆಟ್ಟಿ
2) ನಂಜುಂಡ 5) ನಾಯಕ
3) ಕುಮಾರ 6) ನಾರಾಯಣ

ಮಾಹಿತಿ ಸಂಗ್ರಹಿಸಿದವರು:
1) ತ್ರಿವೇಣಿ. R 4) ರಾಜು
2) ಭ್ರಮರಾಂಭ 5) ನಂಜುಂಡಯ್ಯ
3) ಯಶೋಧ 6) ಮಾದೇವಸ್ವಾಮಿ

# ಮಾದರಿ ಕ್ರಿಯಾ ಯೋಜನೆ ನಮೂನೆ

| ಕ್ರ. ಸಂ | ಮಾಡಬೇಕಾದ ಕೆಲಸಗಳು | ವೈಯಕ್ತಿಕ ಜನರ ಜವಾಬ್ದಾರಿ | ಸಮುದಾಯದ ಜನಾಬ್ದಾರಿ | ಸರ್ಕಾರದ ಜವಾಬ್ದಾರಿ | ಅವಧಿ | ಯಾರು ಜವಾಬ್ದಾರಿ ತೆಗೆದುಕೊಳ್ಳುವರು | ನಿರ್ವಹಣೆ ಯಾರು |
|---|---|---|---|---|---|---|---|
| | | | | | | | |